## ಕರ್ನಾಟಕ ಸರ್ಕಾರ
## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# "ಸಂಜೀವಿನಿ"– ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ

## ವಾರ್ಷಿಕ ವರದಿ 2015–16 (ಡಿಸೆಂಬರ್ ಅಂತ್ಯದವರೆಗೆ)

**ಅಭಿಯಾನ ನಿರ್ದೇಶಕರ ಕಛೇರಿ,**
**ನಂ.55, ಅಭಯ ಸಂಕೀರ್ಣ, 4ನೇ ಮಹಡಿ, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560020**
**ದೂ: 080–23083000, ಫ್ಯಾಕ್ಸ್: 080–23083013**
**ಇ–ಮೈಲ್: nrlmkarnataka@gmail.com**

## <u>"ಸಂಜೀವಿನಿ" – ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ:</u>

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಎಸ್‌ಜಿಎಸ್‌ವೈ ಯೋಜನೆಯನ್ನು ಪುನರ್‌ರಚಿಸಿ ಆಜೀವಿಕ – ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್‌ಆರ್‌ಎಲ್‌ಎಂ) 2010–11ರಿಂದ ಜಾರಿಗೊಳಿಸಿದೆ. ಇದರನ್ವಯ ರಾಜ್ಯ ಸರ್ಕಾರವು ರಾಜ್ಯದಲ್ಲಿ ಆಜೀವಿಕ ಯೋಜನೆಯನ್ನು "ಸಂಜೀವಿನಿ" ಹೆಸರಿನಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ (ಕೆಎಸ್‌ಆರ್‌ಎಲ್‌ಪಿಎಸ್) ಮೂಲಕ ಹಂತ ಹಂತವಾಗಿ ಜಾರಿಗೊಳಿಸಲಾಗುತ್ತಿದೆ.

ಪ್ರಥಮ ಹಂತದಲ್ಲಿ, ರಾಜ್ಯದ 5 ಜಿಲ್ಲೆಗಳ 20 ತಾಲ್ಲೂಕುಗಳಲ್ಲಿ ಯೋಜನೆಯನ್ನು ಇಂಟೆನ್ಸಿವ್ ತಾಲ್ಲೂಕುಗಳಾಗಿ (Intensive Block) ಅನುಷ್ಠಾನಗೊಳಿಸಲಾಗುತ್ತಿದೆ. ಅವುಗಳೆಂದರೆ, **ಮೈಸೂರು** ಜಿಲ್ಲೆ (ಹೆಚ್.ಡಿ.ಕೋಟೆ, ಹುಣಸೂರು, ನಂಜನಗೂಡು, ಟಿ.ನರಸೀಪುರ), **ತುಮಕೂರು** ಜಿಲ್ಲೆ (ಪಾವಗಡ, ಚಿಕ್ಕನಾಯಕನಹಳ್ಳಿ, ಮಧುಗಿರಿ, ಶಿರಾ), **ಗದಗ** ಜಿಲ್ಲೆ (ಶಿರಹಟ್ಟಿ, ನರಗುಂದ, ಗದಗ, ಮುಂಡರಗಿ, ರೋಣ), **ಕೊಪ್ಪಳ** ಜಿಲ್ಲೆ (ಯಲಬುರ್ಗಾ, ಕುಷ್ಟಗಿ, ಕೊಪ್ಪಳ) ಹಾಗೂ **ಉತ್ತರ ಕನ್ನಡ** ಜಿಲ್ಲೆ (ಅಂಕೋಲ, ಜೋಯಿಡ, ಕುಮುಟ, ಯಲ್ಲಾಪುರ). ಹಿಂದುಳಿದ ತಾಲ್ಲೂಕುಗಳನ್ನು ಪರಿಗಣಿಸಿರುವ ಡಾ॥ ನಂಜುಂಡಪ್ಪರವರ ಸಮಿತಿ ವರದಿ ಆಧಾರದ ಮೇಲೆ 2015–16ನೇ ಸಾಲಿನಲ್ಲಿ ಅಧಿಕ 64 ತಾಲ್ಲೂಕುಗಳನ್ನು ಇಂಟೆನ್ಸೀವ್ ವ್ಯಾಪ್ತಿಗೆ ಪರಿಗಣಿಸಲಾಗಿದೆ ಉಳಿದ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಹಂತಗಳಲ್ಲಿ ಇಂಟೆನ್ಸೀವ್ ಕಾರ್ಯ ವ್ಯಾಪ್ತಿಗೆ ಅಳವಡಿಸಲು ಅನುಮೋದನೆಯನ್ನು ದಿನಾಂಕ: 05.09.2015 ರಂದು ಸಂಜೀವಿನಿ ಸಂಸ್ಥೆಯ 5ನೇ ಕಾರ್ಯಕಾರಿ ಸಮಿತಿ ಮತ್ತು ದಿನಾಂಕ: 19.10.2015 ರಂದು ನಡೆದ ಮೊದಲನೇ ಸಾಮಾನ್ಯ ಸಭೆಯಲ್ಲಿ ಪಡೆಯಲಾಗಿದೆ. ವಿವರಗಳನ್ನು ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ : ಇಂಟೆನ್ಸೀವ್ ಕಾರ್ಯತಂತ್ರ ಹಂತವಾರು ಯೋಜನೆ**

| Phase | ವರ್ಷ | ಜಿಲ್ಲೆಗಳು | ತಾಲ್ಲೂಕುಗಳು |
|---|---|---|---|
| I | 2014-15 | 5 | 20 |
| II | 2015-16 | 20 | 64 |
| III | 2016-17 | 2 | 28 |
| IV | 2017-18 | 3 | 64 |
| **Total** | | **30** | **176** |

ಉಳಿದ 92 ತಾಲ್ಲೂಕುಗಳನ್ನು ನಾನ್ ಇಂಟೆನ್ಸಿವ್ ತಾಲ್ಲೂಕುಗಳಾಗಿ (Non Intensive Block) ಅನುಷ್ಠಾನಗೊಳಿಸಲಾಗುತ್ತಿದೆ.

## <u>2015–16ನೇ ಸಾಲಿನಲ್ಲಿ "ಸಂಜೀವಿನಿ"– (ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆ)ಯಡಿ ಸಾಧಿಸಿರುವ ಪ್ರಗತಿಯ ವಿವರ:</u>

### <u>ವಾರ್ಷಿಕ ಕ್ರಿಯಾ ಯೋಜನೆ:</u>

ಕೆಎಸ್‌ಆರ್‌ಎಲ್‌ಎಂಗೆ ಸಂಬಂಧಿಸಿದಂತೆ 2015–16ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಗೆ ದಿನಾಂಕ:24.03.2015 ರಂದು ನಡೆದ ಭಾರತ ಸರ್ಕಾರದ Empowered Committeeಯು ಚಟುವಟಿಕೆಗಳಿಗೆ ಅನುಮೋದಿಸಿ ಕೆಳಕಂಡಂತೆ ಹಂಚಿಕೆ ನೀಡಿದೆ.

2015–16ನೇ ಸಾಲಿನ ಕೆಎಸ್‌ಆರ್‌ಎಲ್‌ಪಿಎಸ್ ನ ಅನುಮೋದಿತ ಕ್ರಿಯಾ ಯೋಜನೆ

| ಕ್ರಮ ಸಂಖ್ಯೆ | ವಿವರ | ಹಂಚಿಕೆ (ರೂ.ಲಕ್ಷಗಳಲ್ಲಿ) | | |
|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು |
| 1 | ಎನ್‌ಆರ್‌ಎಲ್‌ಪಿ | 3618 | 2412 | 6030 |
| 2 | ಎನ್‌ಆರ್‌ಎಲ್‌ಎಂ *(ಆಡಳಿತಾತ್ಮಕ ವೆಚ್ಚ ಸೇರಿ) | 1272 | 848 | 2120 |
| 3 | ಬಡ್ಡಿ ಸಹಾಯಧನ | 614 | 205 | 819 |
| 4 | ಸರಸ್ ಮೇಳ* | 35 | | 35 |
| 5 | ಆರ್‌ಸೆಟಿ | 64 | | 64 |
| | **ಒಟ್ಟು** | **5603** | **3465** | **9068** |

***ಸರಸ್ ಮೇಳವನ್ನು ಮೆಟ್ರೋ ಸಿಟಿಯಲ್ಲಿ ಆಯೋಜಿಸಿದಲ್ಲಿ ರೂ.35.00 ಲಕ್ಷದಿಂದ ರೂ.40.00 ಲಕ್ಷಕ್ಕೆ ಹೆಚ್ಚಿಸಲು ಅನುಮೋದನೆ ನೀಡಲಾಗಿದೆ.**

**ನೇಮಕಾತಿ:**

ಕೆಎಸ್‌ಆರ್‌ಎಲ್‌ಎಂ ಅಭಿಯಾನಕ್ಕೆ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಿಬ್ಬಂದಿಗಳ ನೇಮಹಾತಿ ಪ್ರಕ್ರಿಯೆ ಪೂರ್ಣಗೊಂಡಿದ್ದು, 264 ಅಧಿಕಾರಿ/ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸಿಬ್ಬಂದಿಗಳ ವಿವರ ಈ ಕೆಳಕಂಡಂತಿದೆ.

| ಘಟಕ | ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ |
|---|---|
| ರಾಜ್ಯ ಅಭಿಯಾನ ನಿರ್ವಹಣಾ ಘಟಕ (ಎಸ್‌ಎಂಎಂಯು) | 31 |
| ಜಿಲ್ಲಾ ಅಭಿಯಾನ ನಿರ್ವಹಣಾ ಘಟಕ (ಡಿಎಂಎಂಯು) | 45 |
| ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕ (ಟಿಎಂಎಂಯು) | 110 |
| ಎನ್‌ಆರ್‌ಎಲ್‌ಎಂ | 78 |
| ಒಟ್ಟು | 264 |

**ಜಿಲ್ಲಾವಾರು** ಸಿಬ್ಬಂದಿ **ನೇಮಕಾತಿ ವಿವರ:**

| ಕ್ರ.ಸಂ | ಜಿಲ್ಲೆಯ ಹೆಸರು | ಡಿಎಂಎಂಯು | ಟಿಎಂಎಂಯು | ಒಟ್ಟು |
|---|---|---|---|---|
| 1 | ಮೈಸೂರು | 9 | 26 | 35 |
| 2 | ಉತ್ತರ ಕನ್ನಡ | 8 | 21 | 29 |
| 3 | ಗದಗ್ | 8 | 23 | 31 |
| 4 | ಕೊಪ್ಪಳ | 10 | 19 | 29 |
| 5 | ತುಮಕೂರು | 10 | 21 | 31 |
| | ಇಂಟೆನ್ಸೀವ್ ಒಟ್ಟು | 45 | 110 | 155 |
| 6 | ಎಸ್‌ಎಂಎಂಯು | | | 31 |
| 7 | ಎನ್‌ಆರ್‌ಎಲ್‌ಎಂ | 14 | 64 | 78 |
| | ಒಟ್ಟು | | | 264 |

## ಕ್ಷೇತ್ರ ಭೇಟಿ:

ಕೆಎಸ್‌ಆರ್‌ಎಲ್‌ಎಂನ ಸಂಸ್ಥೆಯ ಸಿಬ್ಬಂದಿಗಳು ಆಂಧ್ರ ಪ್ರದೇಶ, ಕೇರಳ, ತಮಿಳುನಾಡು ರಾಜ್ಯಗಳಿಗೆ ಭೇಟಿ ನೀಡಿರುತ್ತಾರೆ. ಭೇಟಿ ಸಂದರ್ಭದಲ್ಲಿ ಸಂಬಂಧಪಟ್ಟ ರಾಜ್ಯಗಳು ಯಾವ ರೀತಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುತ್ತಿದೆ ಎಂಬುವುದರ ಬಗ್ಗೆ ಅಧ್ಯಯನ ನಡೆಸಿದೆ. ಇವುಗಳನ್ನಾಧರಿಸಿ ರಾಜ್ಯದಲ್ಲಿ ಯೋಜನೆಯ ಕಾರ್ಯತಂತ್ರವನ್ನು ರೂಪಿಸಿ, ಈ ಬಗ್ಗೆ ಪ್ರಾಯೋಗಿಕ (ಪೈಲೆಟ್) ಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

## ಸಾಮಾಜಿಕ ಕ್ರೋಢೀಕರಣ ಹಾಗೂ ತರಬೇತಿಗೆ ಸಂಬಂಧಿಸಿದ ಪ್ರಗತಿ:

### ಸಾಂಸ್ಥಿಕ ಸಂಸ್ಥೆಗಳ ರಚನೆ ಮತ್ತು ಬಲವರ್ಧನೆ:



ಬಡವರನ್ನು ಕ್ರೂಢೀಕರಿಸಿ ಅವರದೇ ಆದ ಸಂಸ್ಥೆಗಳನ್ನು ರಚಿಸಿ ಸಾಮರ್ಥ್ಯ ಬಲವರ್ಧನೆ ಮಾಡುವುದು ಬಡತನ ನಿರ್ಮೂಲನ ಮಾಡಲು ಅತ್ಯಗತ್ಯವಾಗಿರುತ್ತದೆ. ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನವು ಬಡತನದಲ್ಲಿರುವ ಎಲ್ಲಾ ಮಹಿಳೆಯರನ್ನು ಒಂದುಗೂಡಿಸಿ ಮಾಹಿತಿ ಪಡೆಯಲು ಮತ್ತು ವಿಷಯ ವಿನಿಮಯ ಮಾಡಿಕೊಳ್ಳಲು ಸಾಂಸ್ಥಿಕ ಸಂಘಟನೆಗಳು ಮತ್ತು ಸಂಸ್ಥೆಗಳನ್ನು ರಚಿಸುವುದರ ಮೂಲಕ ಕಡು ಬಡತನದಲ್ಲಿರುವ ಮಹಿಳೆಯರಿಗೆ ಒಂದು ವೇದಿಕೆಯನ್ನು ಸೃಷ್ಟಿಸಿರುತ್ತದೆ. ಬಡವರಿಂದ ಮತ್ತು ಬಡವರಿಗಾಗಿ ರಚಿಸಲ್ಪಟ್ಟ ಈ ಸಂಸ್ಥೆಗಳು ಸ್ಥಳೀಯ ಸರ್ಕಾರದೊಂದಿಗೆ, ವಿವಿಧ ಸೇವೆಗಳನ್ನು ನೀಡುತ್ತಿರುವ ಸಂಸ್ಥೆಗಳೊಂದಿಗೆ, ಬ್ಯಾಂಕ್‌ಗಳೊಂದಿಗೆ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಘಟನೆಗಳೊಂದಿಗೆ ಹಾಗೂ ಇತರೆ ಸಂಸ್ಥೆಗಳೊಂದಿಗೆ ಕಾರ್ಯನಿರ್ವಹಿಸಿ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳನ್ನು ಒದಗಿಸಲು ನೆರವಾಗುತ್ತವೆ. ವಿವಿಧ ಹಂತದಲ್ಲಿ ಸಂಸ್ಥೆಗಳನ್ನು ರಚಿಸುವುದರಿಂದ ಬಡ ಮಹಿಳೆಯರಿಗೆ ಒಗ್ಗಟ್ಟಾಗಿ ತಮ್ಮ ಹಕ್ಕುಗಳ ಬಗ್ಗೆ ಮಾತನಾಡಲು ಹೆಚ್ಚಿನ ಅವಕಾಶವನ್ನು ಕೊಡುವುದರೊಂದಿಗೆ ಆರ್ಥಿಕ ಸಮಾನತೆಯನ್ನು ಒದಗಿಸಲು ನೆರವಾಗುತ್ತದೆ.

ಸಾಮಾಜಿಕ ಕ್ರೋಡೀಕರಣ ಕಾರ್ಯತಂತ್ರವನ್ನು ಅನುಷ್ಠಾನಗೊಳಿಸಲು ಪ್ರತಿ ತಾಲ್ಲೂಕಿನಿಂದ 20 ಜನ ಪರಿಣಿತ ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿ ತರಬೇತಿಯನ್ನು ನೀಡಲಾಗುತ್ತದೆ. ಈ ರೀತಿ ತರಬೇತಿ ನೀಡಿದ ಪರಿಣಿತ ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು 5 ಜನರನ್ನೊಳಗೊಂಡ 4 ತಂಡಗಳಾಗಿ ವಿಂಗಡಿಸಿ ಗ್ರಾಮ ವಾಸ್ತವ್ಯ ಮಾಡುವುದರ ಮೂಲಕ ಸಾಮಾಜಿಕ ಕ್ರೋಡೀಕರಣವನ್ನು ಮಾಡಲಾಗುತದೆ. ಪ್ರತೀ ತಂಡವು 14 ದಿನಗಳವರೆಗೆ ಗ್ರಾಮ ವಾಸ್ತವ್ಯ ಮಾಡಿ 50%ರಷ್ಟು ವಾರ್ಡ್ ಮಟ್ಟದ ಒಕ್ಕೂಟಗಳನ್ನು ಮಾಡುವುದರೊಂದಿಗೆ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳನ್ನು ರಚಿಸುತ್ತಾರೆ.



ಈ 14 ದಿನಗಳಲ್ಲಿ ಪರಿಣಿತ ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಗ್ರಾಮದಲ್ಲಿ ಈಗಾಗಲೇ ರಚಿಸಲ್ಪಟ್ಟು ಕಾರ್ಯನಿರ್ವಹಿಸುತ್ತಿರುವ ಸ್ವಸಹಾಯ ಗುಂಪುಗಳನ್ನು ಗುರುತಿಸಿ ಅವುಗಳನ್ನು ಎ, ಬಿ ಮತ್ತು ಸಿ ಎಂದು ಶ್ರೇಣೀಕರಣಗೊಳಿಸಿ, ಈ ಸ್ವಸಹಾಯ ಗುಂಪುಗಳನ್ನೊಳಗೊಂಡ ವಾರ್ಡ್ ಮಟ್ಟದ ಮತ್ತು ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳನ್ನು ರಚಿಸಿರುತ್ತಾರೆ. ತದನಂತರದಲ್ಲಿ ಇನ್ನೊಂದು ಗ್ರಾಮಕ್ಕೆ ಗ್ರಾಮ ವಾಸ್ತವ್ಯಕ್ಕಾಗಿ ತೆರಳುತ್ತಾರೆ. ಪ್ರತೀ ಎಂಸಿಆರ್‌ಪಿ ತಂಡವು ಒಂದು ವರ್ಷದಲ್ಲಿ 7 ಗ್ರಾಮ ಪಂಚಾಯತ್‌ಗಳಲ್ಲಿ ಗ್ರಾಮ ವಾಸ್ತವ್ಯವನ್ನು ಮಾಡುವುದು. ಅದರಂತೆ ಪರಿಣಿತ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ತಂಡವು 2 ವರ್ಷಗಳ ಕಾಲಾವಧಿಯಲ್ಲಿ ಒಂದು ತಾಲ್ಲೂಕಿನಲ್ಲಿರುವ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳನ್ನು ರಚಿಸಲು ಅನುವಾಗುವಂತೆ ಕಾರ್ಯತಂತ್ರ ರೂಪಿಸಲಾಗಿದೆ.

ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟವು ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿ, ಅವರುಗಳ ಮೂಲಕ ಸಾಮಾಜಿಕ ಕ್ರೋಡೀಕರಣ ಪ್ರಕ್ರಿಯೆಯನ್ನು ಮುಂದುವರಿಸುವುದು, ತದ ನಂತರ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟವು ಸ್ವಸಹಾಯ ಗುಂಪುಗಳ ಸಾಮರ್ಥ್ಯ ಬಲವರ್ಧನೆ ಬಗ್ಗೆ ವಿಶ್ಲೇಷಿಸಿ ಅಗತ್ಯತೆಗೆ ಅನುಸಾರವಾಗಿ ತರಬೇತಿಯನ್ನು ಆಯೋಜಿಸುವುದು, ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟವು ಕಿರುಬಂಡವಾಳ ಹೂಡಿಕೆ ಯೋಜನೆ ತಯಾರಿಸಲು ಮತ್ತು ಸ್ವಸಹಾಯ ಗುಂಪುಗಳಿಗೆ ಕಿರು ಬಂಡವಾಳ ನಿಧಿಯನ್ನು ಒದಗಿಸಲು ಕ್ರಮಕೈಗೊಳ್ಳುತ್ತದೆ. ಸ್ವಸಹಾಯ ಗುಂಪುಗಳಿಗೆ ಬ್ಯಾಂಕ್ ಸಂಪರ್ಕವನ್ನು ಕಲ್ಪಿಸಿ ಅಗತ್ಯತೆಗೆ ಅನುಸಾರವಾಗಿ ಸ್ವಸಹಾಯ ಗುಂಪುಗಳಿಗೆ ಸಾಲವನ್ನು ಪಡೆಯಲು ಸಹಕಾರ ನೀಡುತ್ತದೆ. ಗ್ರಾಮೀಣ ಜೀವನೋಪಾಯ ಕಾರ್ಯಕ್ರಮದ ಭಾಗವಾಗಿ ಗ್ರಾಮ ಪಂಚಾಯತ್ ಜೊತೆಗೆ ಅಭಿಗಮನ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯತ್ ಒಕ್ಕೂಟವು ಕೈಗೊಳ್ಳುತ್ತದೆ.



- ಕಳೆದ ಮೂರು ವರ್ಷಗಳಲ್ಲಿ ಸಂಜೀವಿನಿ ಸಂಸ್ಥೆಯು, ಸ್ವಸಹಾಯ ಗುಂಪುಗಳ ಬಲವರ್ಧನೆಗೆ ಹಲವಾರು ಕ್ರಮಗಳನ್ನು ಕೈಗೊಂಡ, ಕ್ಷೇತ್ರ ಮಟ್ಟದಲ್ಲಿ ಸ್ವಸಹಾಯ ಗುಂಪುಗಳನ್ನು ಒಗ್ಗೂಡಿಸಿ ವಾರ್ಡ್ ಮತ್ತು ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳನ್ನು ರಚಿಸಿರುತ್ತದೆ.
- ಅನುಮೋದಿತ ವಾರ್ಷಿಕ ಕ್ರಿಯಾ ಯೋಜನೆಯಂತೆ 2015–16ನೇ ಸಾಲಿನಲ್ಲಿ 6 ಜಿಲ್ಲೆಗಳಲ್ಲಿ 20 ತಾಲ್ಲೂಕುಗಳನ್ನು ಇಂಟೆನ್ಸೀವ್ ಕಾರ್ಯತಂತ್ರಕ್ಕೆ ಒಳಪಡಿಸಬೇಕಾಗಿತ್ತು. ಆದರೆ ಪ್ರಸಕ್ತ ಸಾಲಿನಲ್ಲಿ 20 ಜಿಲ್ಲೆಗಳಿಂದ 64 ತಾಲ್ಲೂಕುಗಳನ್ನು ಇಂಟೆನ್ಸೀವ್ ಕಾರ್ಯತಂತ್ರಕ್ಕೆ ಅಳವಡಿಸಲಾಗಿದ್ದು, ಒಟ್ಟಾರೆ 84 ತಾಲ್ಲೂಕುಗಳಲ್ಲಿ ಇಂಟೇನ್ಸೀವ್ ಕಾರ್ಯತಂತ್ರವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದಾಗಿ ಯೋಜನೆಗಳ ಅನುಷ್ಠಾನವನ್ನು ಬೃಹತ್ ಪ್ರಮಾಣದಲ್ಲಿ ವಿಸ್ತರಿಸಿದಂತಾಗಿದೆ.
- ಒಗ್ಗೂಡುವಿಕೆಯ ಪ್ರಕ್ರಿಯೆಗೆ ಪೂರಕವಾಗಿ 3451 ಹೊಸ ಸ್ವಸಹಾಯ ಗುಂಪುಗಳನ್ನು ರಚಿಸಲಾಗಿರುತ್ತದೆ. 20 ಇಂಟೆನ್ಸೀವ್ ತಾಲ್ಲೂಕುಗಳಲ್ಲಿ 487 ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳನ್ನು ರಚಿಸಲಾಗಿದ್ದು, ವಾರ್ಷಿಕ ಗುರಿಯಾದ 450ಕ್ಕೂ ಹೆಚ್ಚಿನ ಪ್ರಗತಿಯನ್ನು ಸಾಧಿಸಲಾಗಿದೆ. **ಇಂಟೆನ್ಸೀವ್ ತಾಲ್ಲೂಕುಗಳಲ್ಲಿನ ಸಾಂಸ್ಥಿಕ ಬಲವರ್ಧನೆ ಮತ್ತು ಸಾಮರ್ಥ್ಯ ಬಲವರ್ಧನೆಯ ಪ್ರಗತಿಯನ್ನು ಅನುಬಂಧ – 1ರಲ್ಲಿ ನೀಡಲಾಗಿದೆ.**

<u>ಪಂಚಾಯತ್ ರಾಜ್ ಸಂಸ್ಥೆ ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳ ಅಭಿಗಮನ:</u>

ಸಂಜೀವಿನಿಯು ಕೇರಳ ರಾಜ್ಯದ ಕುಡುಂಬಶ್ರೀ ಸಂಸ್ಥೆಯೊಂದಿಗೆ ಪಂಚಾಯತ್ ರಾಜ್ ಸಂಸ್ಥೆ ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳ ಅಭಿಗಮನದ ಯೋಜನೆಯನ್ನು ತುಮಕೂರು ಜಿಲ್ಲೆಯ ಗುಬ್ಬಿ ಮತ್ತು ಪಾವಗಡ ಹಾಗೂ ಕೊಪ್ಪಳ ಜಿಲ್ಲೆಯ ಕೊಪ್ಪಳ ಮತ್ತು ಗಂಗಾವತಿ ತಾಲ್ಲೂಕುಗಳಲ್ಲಿ. ಪ್ರತಿ ತಾಲ್ಲೂಕುಗಳಿಂದ 10 ಗ್ರಾಮ ಪಂಚಾಯತಿಗಳಂತೆ ಒಟ್ಟು 40 ಗ್ರಾಮ ಪಂಚಾಯತಿಗಳನ್ನು ಯೋಜನೆ ಅನುಷ್ಠಾನಗೊಳಿಸಲು ಆಯ್ಕೆ ಮಾಡಿಕೊಳ್ಳಲಾಗಿದೆ.

ಇದಕ್ಕೆ ಪೂರಕವಾಗಿ ಕುಡುಂಬಶ್ರೀ ಸಂಸ್ಥೆಯೊಂದಿಗೆ ಒಡಂಬಂಡಿಕೆಯನ್ನು ಮಾಡಿಕೊಳ್ಳಲಾಗಿದೆ. ಯೋಜನೆ ಅನುಷ್ಠಾನ ಸಂದರ್ಭದಲ್ಲಿ ಸಂಸ್ಥೆಗೆ ಭೇಟಿ ನೀಡಿ ಪಂಚಾಯತ್ ರಾಜ್ ಸಂಸ್ಥೆ ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳ ಅಭಿಗಮನದ ಕುರಿತಂತೆ ಅಧ್ಯಯನ ನಡೆಸಲಾಗುತ್ತದೆ. ನಂತರದಲ್ಲಿ ಸ್ಕೋಪಿಂಗ್ ಸ್ಟಡಿ, ಪಂಚಾಯತ್ ರಾಜ್/ ಮಹಿಳಾ ಚುನಾಯಿತ ಪ್ರತಿನಿಧಿಗಳ ಸಾಮರ್ಥ್ಯ ಬಲವರ್ಧನೆ, ಸ್ಥಳೀಯ ಸಂಪನ್ಮೂಲ ಗುಂಪುಗಳಿಗೆ ತರಬೇತಿ, ಗ್ರಾಮ ಸಭೆಗಳ ಸಂಘಟನೆ, ತಾಲ್ಲೂಕಾ ಸಂಪನ್ಮೂಲ ಗುಂಪುಗಳ ರಚನೆ ಮತ್ತು ತರಬೇತಿ, ಎಂಜಿಎನ್ಆರ್ಇಜಿಎ/ ಟಿಎಸ್ಸಿ ಯೋಜನೆ ಅನುಷ್ಠಾನ, ಗ್ರಾಮ/ ಗ್ರಾಮ ಪಂಚಾಯತ್ ಮಟ್ಟದ ಸಮುದಾಯ ಆಧಾರಿತ ಸಂಸ್ಥೆಗಳ ರಚನೆ, ಬೆಂಬಲ ಸಂಸ್ಥೆ/ ಬಾಲ ಸಭೆಗಳ ರಚನೆಗೆ ಪ್ರಾಶಸ್ತ್ಯ ನೀಡಲಾಗಿದೆ.

**ಯೋಜನಾ ಅನುಷ್ಠಾನಕ್ಕೆ ಒಟ್ಟು ರೂ.4.76 ಕೊಟಿಗಳ ಅನುದಾನವನ್ನು ನಿಗಧಿಪಡಿಸಲಾಗಿದೆ.**

**ಪ್ರಸ್ತುತ ಪ್ರಗತಿ:**

ಕುಡುಂಬಶ್ರೀ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳು ತುಮಕೂರು ಜಿಲ್ಲೆಯ ಗುಬ್ಬಿ ಮತ್ತು ಪಾವಗಡ ಹಾಗೂ ಕೊಪ್ಪಳ ಜಿಲ್ಲೆಯ ಗಂಗಾವತಿ ಮತ್ತು ಕೊಪ್ಪಳ ತಾಲ್ಲೂಕುಗಳಿಗೆ ಕ್ಷೇತ್ರ ಭೇಟಿಯನ್ನು ನೀಡಿ ಪಂಚಾಯತ್ ರಾಜ್ ಸಂಸ್ಥೆ ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳ ಕುರಿತಂತೆ ಅಧ್ಯಯನ ನಡೆಸಿರುತ್ತಾರೆ. ಪಂಚಾಯತ್ ರಾಜ್ ಸಂಸ್ಥೆ ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳ ಮತ್ತು ವಿವಿಧ ಕ್ಷೇತ್ರದಲ್ಲಿ ಪರಿಣಿತರಿರುವ ವಿವಿಧ ಇಲಾಖೆ/ ಸರ್ಕಾರೇತರ ಸಂಸ್ಥೆಗಳ ತಜ್ಞರನ್ನೊಳಗೊಂಡ ರಾಜ್ಯ ಮಟ್ಟದ ಸಂಪನ್ಮೂಲ ತಂಡವನ್ನು ರಚಿಸಲಾಗಿದೆ.

ರಾಜ್ಯ ಸಂಪನ್ಮೂಲ ಗುಂಪಿನ ಸದಸ್ಯರಿಗೆ ಯೋಜನಾ ಅನುಷ್ಠಾನಕ್ಕೆ ಸೂಕ್ತ ಮಾರ್ಗದರ್ಶನ ಹಾಗೂ ಸಲಹೆಗಳನ್ನು ನೀಡಲು ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.
ಯೋಜನೆ ಅನುಷ್ಠಾನದ ಮುಂದಿನ ಹಂತವಾಗಿ ಮಾಡ್ಯೂಲ್ ಡೆವಲಪ್ಮೆಂಟ್ ಕಾರ್ಯಗಾರವನ್ನು ಮೈಸೂರಿನ ಎಸ್ಐಆರ್‌ಡಿ/ ಎಸ್ಐಯುಡಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಪಂಚಾಯತ್ ರಾಜ್ ಸಂಸ್ಥೆಗಳ ಅಧ್ಯಯನ ಕುರಿತಂತೆ ರಾಜ್ಯ ಸಂಪನ್ಮೂಲ ವ್ಯಕ್ತಿಗಳಿಗೆ ಕೇರಳ ರಾಜ್ಯದ ಕುಡುಂಬಶ್ರೀ ಸಂಸ್ಥೆ ಸಹಯೋಗದೊಂದಿಗೆ ಕ್ಷೇತ್ರ ಪ್ರವಾಸವನ್ನು ವಯನಾಡ್ನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಯೋಜನೆ ಅನುಷ್ಠಾನಕ್ಕೆ ಪೂರಕವಾಗಿ ತರಬೇತುದಾರರನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು ನವಂಬರ್/ ತಿಂಗಳಲ್ಲಿ ಕ್ಷೇತ್ರ ಮಟ್ಟದ ಮೌಲ್ಯ ಮಾಪನ ಕುರಿತಂತೆ ತರಬೇತುದಾರರ ತರಬೇತಿಯನ್ನು ಆಯೋಜಿಸಲಾಗಿದೆ.

ದಿನಾಂಕ: 11.01.2014ರಿಂದ 06.12.2015ರವರೆಗೆ ಕ್ಷೇತ್ರ ಮಟ್ಟದ ಮೌಲ್ಯಮಾಪನದಿಂದ ಸಂಗ್ರಹಿಸಲಾದ ಮಾಹಿತಿಯನ್ನು ಕ್ರೊಡಿಕರಿಸಲು ಮಾಹಿತಿ ಕ್ರೋಢಿಕರಣ ಕಾರ್ಯಗಾರವನ್ನು ಆಯೋಜಿಸಲಾಗಿತ್ತು.

ಪ್ರಸ್ತುತ ರಾಜ್ಯದ ಆಯ್ದ ಸ್ಥಳಗಳಲ್ಲಿ ಯೋಜನೆಯ ಸಮೀಕ್ಷೆ/ ಗುರುತಿಸುವುದು, ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಮತ್ತು ತರಬೇತಿ, ಹೊಸದಾಗಿ ಆಯ್ಕೆಗೊಂಡ ಜನಪ್ರತಿನಿಧಿಗಳಿಗೆ ಯೋಜನೆಯ ದೃಷ್ಠಿಕಕೋನದ ತರಬೇತಿ ಮುಂತಾದವುಗಳನ್ನು ನಿರಂತರವಾಗಿ ಆಯೋಜಿಸಲಾಗುತ್ತಿದೆ.

## ಪಾಲುಗಾರಿಕೆಗಳು (Partnerships)

**ಕ್ಷೀರ ಸಂಜೀವಿನಿ ಹೈನುಗಾರಿಕೆಯ ಮೂಲಕ ಗ್ರಾಮೀಣ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಯೋಜನೆ:**

ಗ್ರಾಮೀಣ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ಸಂಜೀವಿನಿಯು ಮೂರು ವರ್ಷಗಳ ಅವಧಿಗೆ ರಾಜ್ಯದ 30 ಜಿಲ್ಲೆಗಳಲ್ಲಿ ಹೈನುಗಾರಿಕೆ ಅಭಿವೃದ್ದಿ ಕಾರ್ಯಕ್ರಮವನ್ನು ಕೆಎಂಎಫ್‌ನ ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿದೆ. ಈ ಕಾರ್ಯಕ್ರಮದ ಮೂಲಕ 250 ಮಹಿಳಾ ಹಾಲು ಉತ್ಪಾದಕರ ಒಕ್ಕೂಟಗಳ ಮೂಲಕ 10000 ಫಲಾನಿಭವಿಗಳಿಗೆ ನೆರವು ನೀಡುವ ಗುರಿ ಹೊಂದಲಾಗಿದೆ. ಯೋಜನೆಯ ಒಟ್ಟು ಮೊತ್ತ ರೂ.17.10 ಕೋಟಿಗಳಾಗಿದ್ದು, ಸಂಜೀವಿನಿಯ ಪಾಲು ರೂ.14.85 ಕೋಟಿ ಹಾಗೂ ಕೆಎಂಎಫ್‌ನ ಪಾಲು ರೂ.2.25 ಕೋಟಿಗಳು. ಮೊದಲನೇ ಮತ್ತು ಎರಡನೇ ಕಂತಿನ ಅನುದಾನವಾಗಿ ರೂ.7.17 ಕೋಟಿಗಳನ್ನು ಕೆಎಂಎಫ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

**2015–16ನೇ ಸಾಲಿನಲ್ಲಿ ಸಾಧಿಸಲಾದ ಪ್ರಗತಿ ವಿವರ**

| ಯೋಜನೆ ಅನುಷ್ಠಾನ ಸಂಸ್ಥೆ | ಪ್ರದೇಶ | | ಫಲಾನುಭವಿಗಳ ಆಯ್ಕೆ ವಿವರ | | ಅನುದಾನ ವಿವರ (ಲಕ್ಷಗಳಲ್ಲಿ) | |
|---|---|---|---|---|---|---|
| | ಜಿಲ್ಲೆ | ತಾಲ್ಲೂಕು | ಗುರಿ | ಸಾಧನೆ | ಬಿಡುಗಡೆ | ಖರ್ಚು |
| ಕರ್ನಾಟಕ ಹಾಲು ಮಹಾ ಮಂಡಳ | 30 ಜಿಲ್ಲೆಗಳು | 104 | 4320 | 4320 | 227 | 161 |

2015–16ನೇ ಸಾಲಿನಲ್ಲಿ 108 ಸಂಘಗಳಿಂದ 4320 ಆಧ್ಯತಾ ಗುಂಪಿನ ಸದಸ್ಯರಿಗೆ ಯೋಜನೆಯ ಮೂಲಕ ಪಶು ಆರೋಗ್ಯ ಕುರಿತು ಪ್ರಾಥಮಿಕ ತರಬೇತಿಯನ್ನು ನೀಡಲಾಗಿದೆ. ಪಶು ಸಾಕಾಣಿಕೆ ಮತ್ತು ನಿರ್ವಹಣೆ ಕುರಿತು ಫಲಾನುಭವಿಗಳಿಗೆ ಸ್ಥಳೀಯ ಹಂತದಲ್ಲಿ ತರಬೇತಿ ನೀಡಬಹುದಾದ 180 ಮಹಿಳಾ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿದ್ದು, ಅವರುಗಳಿಗೆ ಪಶು ಪಾಲನೆ ಮತ್ತು ನಿರ್ವಹಣೆ ಕುರಿತು ತರಬೇತಿಯನ್ನು ನೀಡಲಾಗಿರುತ್ತದೆ. ರೂ.10000 ಮೊತ್ತದ ಅಂಚಿನ ಹಣದ ಸಹಾಯದೊಂದಿಗೆ 1097 ಹೈನು ರಾಸುಗಳನ್ನು ಖರೀದಿಸಿರುತ್ತಾರೆ. ಇದುವರೆವಿಗೆ ಒಟ್ಟು 167 ಮಹಿಳಾ ಸ್ವ–ಸಹಾಯ ಗುಂಪುಗಳನ್ನು ರಚಿಸಲಾಗಿದ್ದು, ಅಂದಾಜು ರೂ.30.00 ಲಕ್ಷಗಳಷ್ಟು ಉಳಿತಾಯ ಮಾಡಲಾಗಿದೆ. ಹಾಗೂ ರೂ.76.00 ಲಕ್ಷಗಳಷ್ಟು ಬ್ಯಾಂಕ್ ಸಂಪರ್ಕ ಕಲ್ಪಿಸಲಾಗಿದೆ. ಯೋಜನೆಯಡಿ 585 ವಿವಿಧ ಜಾಗೃತಿ/ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಂಘದ ವಿವಿಧ ಚಟುವಟಿಕೆಗಳನ್ನು ನಡೆಸಲು ಇದುವರೆವಿಗೆ ಒಟ್ಟು 180 ಮಹಿಳಾ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಲಾಗಿದೆ.

| ಅರಿವು ಕಾರ್ಯಕ್ರಮಗಳ ವಿವರ | ಸಂಖ್ಯೆ | ಭಾಗವಹಿಸಿದವರ ಸಂಖ್ಯೆ |
|---|---|---|
| ಆರೋಗ್ಯ ಮತ್ತು ಪೌಷ್ಠಿಕತೆ | 257 | 11521 |
| ಲಿಂಗ ಸೂಕ್ಷ್ಮತೆ | 290 | 13311 |
| ಕಾನೂನು ಸಾಕ್ಷರತೆ | 276 | 11654 |
| ಶಿಶು ಮತ್ತು ಮಕ್ಕಳ ಪೋಷಣೆ | 90 | 4135 |

2015–16ನೇ ಸಾಲಿನಲ್ಲಿ 1296 ಹೈನುರಾಸು ಖರೀದಿಸುವ ಗುರಿ ಹೊಂದಲಾಗಿದೆ. ಮಾರ್ಚ್ 2016ರ ಅಂತ್ಯಕ್ಕೆ ಗುರಿ ಸಾಧಿಸಲಾಗುವುದು.

**ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ (ಎಂಕೆಎಸ್‌ಪಿ):**

ಕೃಷಿಯಲ್ಲಿ ಮಹಿಳೆಯರ ಪರಿಸ್ಥಿತಿ ಸುಧಾರಣೆ ಮತ್ತು ಮಹಿಳಾ ಸಬಲೀಕರಣದ ಅವಕಾಶಗಳ ಅಭಿವೃದ್ಧಿಗಾಗಿ ಭಾರತ ಸರ್ಕಾರವು "ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ" ಕಾರ್ಯಕ್ರಮವನ್ನು ಎನ್‌ಆರ್‌ಎಲ್‌ಎಂ ಕಾರ್ಯಕ್ರಮದ ಉಪ ಘಟಕವಾಗಿ ಜಾರಿಗೊಳಿಸಲಾಗಿರುತ್ತದೆ. ಎಂಕೆಎಸ್‌ಪಿ ಕಾರ್ಯಕ್ರಮದ ಪ್ರಾಥಮಿಕ ಉದ್ದೇಶವು ವ್ಯವಸ್ಥಿತವಾದ ಹೂಡಿಕೆ ಮೂಲಕ ಕೃಷಿ ರಂಗದಲ್ಲಿ ಮಹಿಳೆಯರ ಭಾಗವಹಿಸುವಿಕೆ ಮತ್ತು ಉತ್ಪಾದನೆ ಹೆಚ್ಚಿಸಿ, ತನ್ಮೂಲಕ ಗ್ರಾಮೀಣ ಮಹಿಳೆಯರಲ್ಲಿ ಕೃಷಿ ಆಧಾರಿತ ಜೀವನೋಪಾಯ ಚಟುವಟಿಕೆಗಳನ್ನು ರೂಪಿಸುವುದು ಮತ್ತು ಸ್ಥಿರಗೊಳಿಸುವುದಾಗಿದೆ.

ಭಾರತ ಸರ್ಕಾರವು ಗ್ರೀನ್ ಫೌಂಡೇಷನ್ ಸಂಸ್ಥೆಗೆ (ಪಿಐಎ) ರಾಮನಗರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಎಂಕೆಎಸ್‌ಪಿ ಯೋಜನೆಯನ್ನು ಅನುಷ್ಠಾನಗೊಳಿಸಲು ರೂ.6.25 ಕೋಟಿ ಮೊತ್ತದ ಯೋಜನೆಯನ್ನು ಮಂಜೂರು ಮಾಡಿದ್ದು, ರೂ.4.62 ಕೋಟಿಗಳನ್ನು ವೆಚ್ಚ ಮಾಡಲಾಗಿರುತ್ತದೆ. ಪ್ರಸ್ತುತ ಯೋಜನೆ ಅವಧಿ ಮುಗಿದಿದ್ದು, ಮೌಲ್ಯ ಮಾಪನ ವರದಿ ಸಲ್ಲಿಸಿರುತ್ತದೆ. ಅಂತೆಯೇ ಭಾರತ ಸರ್ಕಾರವು ಇನಿಷಿಯೇಟಿವ್ ಫಾರ್ ಡೆವಲಪ್‌ಮೆಂಟ್ ಫೌಂಡೇಷನ್ (ಐಡಿಎಫ್) ಸಂಸ್ಥೆಗೆ ತುಮಕೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ರೂ.15 ಕೋಟಿ ಮೊತ್ತದ ಯೋಜನೆಯನ್ನು ಮಂಜೂರು ಮಾಡಿದೆ. ರಾಜ್ಯ

ಮತ್ತು ಕೇಂದ್ರ ಸರ್ಕಾರದ ಮೊದಲನೇ ಕಂತಿನ ಮೊತ್ತ ರೂ.3.54 ಕೋಟಿಗಳ ಅನುದಾನವನ್ನು ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ. ಎರಡನೇ ವರ್ಷದ ಚಟುವಟಿಕೆಗಳು ಅನುಷ್ಠಾನಗೊಳ್ಳುತ್ತಿವೆ.

ಮುಂದುವರೆದು ಕಲುಬುರಗಿ ಜಿಲ್ಲೆಯ ಮೈರಾಡ ಸಂಸ್ಥೆಗೆ ಎಂಕೆಎಸ್‌ಪಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ.3.21 ಕೋಟಿ ಮೊತ್ತದ ಯೋಜನೆಯನ್ನು ಮಂಜೂರು ಮಾಡಲಾಗಿದ್ದು, ಮೊದಲನೇ ಕಂತಿನ ಹಣವಾಗಿ ಕೇಂದ್ರ ಸರ್ಕಾರವು ರೂ.0.74 ಕೋಟಿಗಳನ್ನು ಮೈರಾಡ ಸಂಸ್ಥೆಗೆ ಬಿಡುಗಡೆ ಮಾಡಲಾಗಿರುತ್ತದೆ. ಎರಡನೇ ವರ್ಷದ ಚಟುವಟಿಕೆಗಳು ಪ್ರಗತಿಯಲ್ಲಿವೆ.

**2015–16ನೇ ಸಾಲಿನಲ್ಲಿ ಸಾಧಿಸಲಾದ ಪ್ರಗತಿ ವಿವರ**

| ಯೋಜನೆ ಅನುಷ್ಠಾನ ಸಂಸ್ಥೆ | ಪ್ರದೇಶ | | ಫಲಾನುಭವಿಗಳ ವಿವರ | | ಅನುದಾನ ವಿವರ (ಲಕ್ಷಗಳಲ್ಲಿ) | |
|---|---|---|---|---|---|---|
| | ಜಿಲ್ಲೆ | ತಾಲ್ಲೂಕು | ಗುರಿ | ಸಾಧನೆ | ಬಿಡುಗಡೆ | ಖರ್ಚು |
| ಐಡಿಎಫ್ | ಬೆಳಗಾಂ | ರಾಯ್‌ಬಾಗ್ | 11000 | 11000 | | 78 |
| | ತುಮಕೂರು | ಗುಬ್ಬಿ | | | | |
| ಮೈರಾಡ | ಕಲಬುರ್ಗಿ | ಸೇಡಂ | 3000 | 3000 | 20 | 25 |
| | | **ಒಟ್ಟು** | **14000** | **14000** | **20** | **103** |

ಮೇಲಿನ ಅಂಕಿ ಅಂಶದಂತೆ ಐ.ಡಿ.ಎಫ್ ಮತ್ತು ಮೈರಾಡ ಸಂಸ್ಥೆಗಳಿಗೆ ವರದಿ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. ಹಿಂದಿನ ಸಾಲಿನಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಪ್ರಸಕ್ತ ಸಾಲಿನಲ್ಲಿ ರೂ.103 ಲಕ್ಷಗಳು ವೆಚ್ಚವಾಗಿರುತ್ತದೆ. ಗ್ರೀನ್ ಫೌಂಡೇಷನ್, ಮೈರಾಡ ಐ.ಡಿ.ಎಫ್ ಸಂಸ್ಥೆಗಳಿಗೆ ತೆಹಲ್‌ವರೆಗೆ ರೂ.890 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಯೋಜನಾ ಅನುಷ್ಠಾನ ಸಂಸ್ಥೆ ಸಲ್ಲಿಸಿರುವ ವಿವರಗಳಂತೆ ಒಟ್ಟು ರೂ.885 ಲಕ್ಷಗಳು ವೆಚ್ಚವಾಗಿರುತ್ತದೆ.

ಯೋಜನೆಯಡಿ ಸುಸ್ಥಿರ ಕೃಷಿ ಪದ್ಧತಿ ಮತ್ತು ಇತರೆ ಕೃಷಿ ಸಂಬಂಧಿತ ಪ್ರಮುಖ ಚಟುವಟಿಕೆಗಳ ಕುರಿತು ರಾಜ್ಯದ 5 ಜಿಲ್ಲೆಗಳಲ್ಲಿ **(ತುಮಕೂರು, ಚಿತ್ರದುರ್ಗ, ರಾಮನಗರ, ಬೆಳಗಾವಿ ಮತ್ತು ಗುಲ್ಬರ್ಗಾ)** 19000 ಮಹಿಳಾ ರೈತ ಫಲಾನುಭವಿಗಳಿಗೆ ತರಬೇತಿಯನ್ನು ಗ್ರೀನ್ ಫೌಂಡೇಷನ್, ಮೈರಾಡ ಮತ್ತು ಐ.ಡಿ.ಎಫ್ ಸಂಸ್ಥೆಗಳ ಮೂಲಕ ನೀಡಲಾಗಿದೆ. ಸಾಂಸ್ಥಿಕ ಬೆಳವಣಿಗೆ ಮತ್ತು ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮದ ಅಡಿಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ 248 ಉತ್ಪಾದಕರ ಗುಂಪುಗಳನ್ನು ಮತ್ತು 24 ಒಕ್ಕೂಟಗಳನ್ನು ರಚಿಸಲಾಗಿದೆ. 1488 ಮಹಿಳಾ ಸ್ವಸಹಾಯ ಗುಂಪುಗಳನ್ನು ರಚಿಸಿ ವಿವಿಧ ತರಬೇತಿಗಳನ್ನು ನೀಡಿ ಸುಮಾರು ರೂ.1170 ಲಕ್ಷಗಳಷ್ಟು ಸಾಲವನ್ನು ಬ್ಯಾಂಕ್‌ನ ಸಂಪರ್ಕದಿಂದ ಒದಗಿಸಲಾಗಿದೆ. ಫಲಾನುಭವಿ ರೈತ ಮಹಿಳೆಯರಿಗೆ ನಿರಂತರವಾಗಿ ಸುಸ್ಥಿರ ಕೃಷಿ ಪದ್ಧತಿಗೆ ಸಂಬಂಧಿಸಿದಂತೆ ಅವಶ್ಯಕವಾದ ತರಬೇತಿ, ತಿಳುವಳಿಕೆ ಮತ್ತು ನೆರವು ನೀಡಲು ಸಹಾಯವಾಗುವಂತೆ 377 ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ, ಸ್ಥಿರ ಕೃಷಿ ಪದ್ದತಿಗಳನ್ನು ಕುರಿತು ತರಬೇತಿಯನ್ನು ನೀಡಲಾಗಿದೆ.




ಕೃಷಿಯಲ್ಲಿ ಅನಾವಶ್ಯಕ ಪರಿಶ್ರಮವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ. ಅದರಲ್ಲಿ 2900 ಹೊಗೆ ರಹಿತ ಒಲೆಗಳನ್ನು ಮತ್ತು 325 ಕೀಟ ನಾಶಕ ಸಿಂಪರಣೆ ಉಪಕರಣ (knapsack sprayers) ಗಳನ್ನು ವಿತರಿಸಲಾಗಿದೆ. 3365 ಫಲಾನುಭವಿಗಳ ಮನೆಯ ಹಿಂಬದಿಯಲ್ಲಿ ಕೈ ತೋಟವನ್ನು ನಿರ್ಮಿಸಲಾಗಿದೆ.

ಫಲಾನುಭವಿಗಳ ಕೃಷಿ ಸಂಬಂಧಿತ ಜ್ಞಾನದ ಉತ್ತಮ ಗ್ರಹಿಕೆಗಾಗಿ ಮತ್ತು ಅರ್ಥಮಾಡಿಸುವಿಕೆ ಕುರಿತು ಅಭಿವೃದ್ಧಿ ಪಡಿಸುವಿಕೆಗೆ ಸಂಬಂಧಿಸಿದಂತೆ ಡಿಜಿಟಲ್ ಗ್ರೀನ್ ಸಂಸ್ಥೆಯ ಸಹಕಾರದೊಂದಿಗೆ ಸುಸ್ಥಿರ ಕೃಷಿ ಪದ್ದತಿಯ ವಿವಿಧ ವಿಷಯಗಳು ಮತ್ತು ಪದ್ಧತಿಗಳನ್ನು ಕುರಿತು 283 ವಿಡಿಯೋ ಚಿತ್ರ ತಯಾರಿಸಲಾಗಿದೆ, ಹಾಗೂ ಸುಸ್ಥಿರ ಕೃಷಿ ಪದ್ಧತಿಗಳ ಕುರಿತಂತೆ ಐಇಸಿ ಸಾಮಗ್ರಿಗಳನ್ನು ಅಭಿವೃದ್ಧಿ ಪಡಿಸಲಾಗಿದೆ.

**<u>ಮೈಕ್ರೋ ಎಂಟರ್‌ಪ್ರೈಸ್ ಕನ್ಸಲ್‌ಟೆಂಟ್ ಪ್ರಾಜೆಕ್ಟ್:</u>**
( ಸಮುದಾಯ ಆಧಾರಿತ ಸಂಪನ್ಮೂಲಗಳ ಪೂರೈಕೆ ಮತ್ತು ಬೆಂಬಲದೊಂದಿಗೆ ಕಿರು ಉದ್ಯಮಗಳ ಅಭಿವೃದ್ಧಿ) ಕಿರು ಉದ್ಯಮಗಳ ಮೂಲಕ ಸ್ವ–ಉದ್ಯೋಗ ರಂಗವನ್ನು ಅಭಿವೃದ್ಧಿ ಪಡಿಸುವುದು ಭಾರತ ಸರ್ಕಾರದ ಜೀವನೋಪಾಯ ಚಟುವಟಿಕೆಯ ಪ್ರಮುಖ ಕಾರ್ಯತಂತ್ರವಾಗಿದ್ದು, ಸ್ವ–ಉದ್ಯೋಗ ಕ್ಷೇತ್ರದ ಮೂಲಕ ಒಂದು ಕೋಟಿ ಬಡ ಜನರಿಗೆ ಜೀವನೋಪಾಯ ಚಟುವಟಿಕೆಗಳನ್ನು ರೂಪಿಸುವ ಯೋಜನೆಯನ್ನು ಕೇಂದ್ರ ಸರ್ಕಾರದ ಎನ್‌ಆರ್‌ಎಲ್‌ಎಂ ಯೋಜನೆಯ ಮೂಲಕ ಅನುಷ್ಠಾನಗೊಳಿಸಲು ಉದ್ದೇಶಿಸಿದೆ.



ಕುಡುಂಬಶ್ರೀ ಸಂಸ್ಥೆಯು ಕೇರಳದಲ್ಲಿ ಎನ್‌ಆರ್‌ಎಲ್‌ಎಂ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಯ ಕಾರ್ಯಕ್ರಮಗಳಲ್ಲಿ ಅತೀಸಣ್ಣ ಉದ್ಯಮಗಳ ಘಟಕ (Micro Enterprise Consultant) ಪ್ರಮುಖವಾದುದ್ದಾಗಿದೆ, ಪ್ರಸ್ತುತ ಸಂಜೀವಿನಿ ಸಂಸ್ಥೆಯು ಕುಡುಂಬಶ್ರೀ ಸಂಸ್ಥೆಯ ಸಹಯೋಗದೊಂದಿಗೆ ಅತೀಸಣ್ಣ ಉದ್ಯಮಗಳ ಘಟಕ (Micro Enterprise Consultant) ಗಳ ಸ್ಥಾಪನೆಗಾಗಿ ಕರ್ನಾಟಕದಲ್ಲಿ ಮಾದರಿ ರೂಪಿಸಲು ಯೋಜನೆ ತಯಾರಿಸಲಾಗಿದೆ. ಈ ಯೋಜನೆಯ ಮೂಲಕ ತರಬೇತಿ ಪಡೆದ ಎಂಇಸಿಗಳು ಸ್ಥಳೀಯ ಮಟ್ಟದಲ್ಲಿ ಕಿರು ಉದ್ಯಮಗಳ ಅಭಿವೃದ್ಧಿಗೆ ಪೂರಕ ಬೆಂಬಲ ಮತ್ತು ಸಹಕಾರ ಒದಗಿಸುವರು. ಈ ಯೋಜನೆಯ ಅವಧಿಯು 3 ವರ್ಷವಾಗಿದ್ದು, ಯೋಜನಾ ವೆಚ್ಚ ರೂ.4.6 ಕೋಟಿ ಎಂದು ನಿಗಧಿಪಡಿಸಲಾಗಿದೆ.

**<u>2015–16ನೇ ಸಾಲಿನಲ್ಲಿ ಸಾಧಿಸಲಾದ ಪ್ರಗತಿ ವಿವರ</u>**

| ಯೋಜನೆ ಅನುಷ್ಠಾನ ಸಂಸ್ಥೆ | ಜಿಲ್ಲೆ | ಎಂಇಸಿಗಳ ಅಭಿವೃದ್ಧಿ | | ಅನುದಾನ ವಿವರ (ಲಕ್ಷಗಳಲ್ಲಿ) | | |
|---|---|---|---|---|---|---|
| | | ಗುರಿ | ಸಾಧನೆ | ಅನುಮೋದಿತ ಮೊತ್ತ | ಬಿಡುಗಡೆ | ವೆಚ್ಚ |
| ಕುಡುಂಬಶ್ರೀ | ಮೈಸೂರು<br>ಗದಗ<br>ಹಾಸನ | 135 | 135 | 460.00 | 51.15 | 42.67 |

ಎನ್‌ಆರ್‌ಓ ಸಂಸ್ಥೆಯಿಂದ 6 ಮೆಂಟರ್ ಎಂಇಸಿಗಳು ಆಯ್ಕೆಗೊಂಡಿದ್ದು, ಅವರುಗಳು ಜಿಲ್ಲಾ ಮಟ್ಟದಲ್ಲಿ ಎಂಇಸಿಗಳು ಸ್ಥಳೀಯ ಮಟ್ಟದಲ್ಲಿ ಬೆಂಚ್ ಮಾರ್ಕಿಂಗ್ ಚಟುವಟಿಕೆ ಕೈಗೊಳ್ಳಲು ಸಹಾಯ ಮಾಡುತ್ತಿರುತ್ತಾರೆ. ಸಣ್ಣ ಉದ್ಯಮಗಳನ್ನು ಸ್ಥಾಪಿಸಲು ಕೇರಳ ರಾಜ್ಯದ ಕುಡುಂಬಶ್ರಿ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು ರಾಜ್ಯದ ಹಾಸನ, ಗದಗ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸುಮಾರು 135 ಎಂಇಸಿಗಳನ್ನು ಗುರುತಿಸಿ ಅವರುಗಳಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿ ನೀಡುವ ಮೂಲಕ ಮೇಲ್ಕಂಡ 3 ಜಿಲ್ಲೆಗಳ ಸಣ್ಣ ಉದ್ಯಮಿಗಳಿಗೆ ಅಗತ್ಯ ಮಾಹಿತಿ ಮತ್ತು ಪ್ರೋತ್ಸಾಹ ನೀಡಲು ಕ್ರಮವಹಿಸಲಾಗಿದೆ. ಎಂಇಸಿ ಯೋಜನೆಯಲ್ಲಿ ಪ್ರಸ್ತುತ ಮಹಿಳಾ ಸ್ವಸಹಾಯ ಗುಂಪುಗಳಿಂದ 121 ಸಣ್ಣ ಉದ್ಯಮಗಳನ್ನು ಪ್ರಾರಂಭಿಸಲಾಗಿದ್ದು, 144

ಉದ್ಯಮಿಗಳು ತೊಡಗಿಕೊಂಡಿದ್ದು, ರೂ.32.00 ಲಕ್ಷಗಳ ಬಂಡವಾಳ ಹೂಡಲಾಗಿದೆ. ಈ ವರ್ಷದ ಅಂತ್ಯಕ್ಕೆ 742 ಸಣ್ಣ ಉದ್ದಿಮೆಗಳನ್ನು ಪ್ರಾರಂಭಿಸುವ ಗುರಿಯನ್ನು ಹೊಂದಿದೆ.

**ಸ್ವಸಹಾಯ ಗುಂಪುಗಳನ್ನು ಮಾಹಿತಿ ತಂತ್ರಾಂಶದಲ್ಲಿ ಅಳವಡಿಸುವುದು:**

ಯೋಜನೆಯಲ್ಲಿ ಸ್ವಸಹಾಯ ಗುಂಪುಗಳ ದತ್ತಾಂಶವನ್ನು ಮಾಹಿತಿ ತಂತ್ರಾಂಶದಲ್ಲಿ ಅಳವಡಿಸುವುದು ಅತ್ಯವಶ್ಯಕವಾಗಿರುತ್ತದೆ. ಅದರಂತೆ 2015ರ ಡಿಸೆಂಬರ್ ಅಂತ್ಯಕ್ಕೆ 2,81,615 ಸ್ವಸಹಾಯ ಗುಂಪುಗಳ ಮಾಹಿತಯನ್ನು ಅಳವಡಿಸಲಾಗಿದ್ದು, ವಿವರವನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

**ಹಣಕಾಸು ಸೇರ್ಪಡೆ:**

ಹಣಕಾಸು ಸೇರ್ಪಡೆ ಪ್ರಕ್ರಿಯೆಯು ಬಡ ಜನರಿಗೆ ಹಣಕಾಸು ಸೇವೆಗಳನ್ನು ಸುಲಭವಾಗಿ ದೊರೆಯುವಂತೆ ಮಾಡುವುದಾಗಿರುತ್ತದೆ. ಕೆಎಸ್ಆರ್ಎಲ್ಪಿಎಸ್ ಯೋಜನೆಯ ಮುಖ್ಯ ಉದ್ದೇಶವು ಗ್ರಾಮೀಣ ಪ್ರದೇಶದ ಸ್ವಸಹಾಯ ಗುಂಪುಗಳು ಸುಲಭ ಮಾರ್ಗದ ಮೂಲಕ ಪೋಷಣೆ ಮತ್ತು ಜೀವನೋಪಾಯ ಚಟುವಟಿಕೆಗಳಿಗೆ ಸಾಲ ಸೌಲಭ್ಯವನ್ನು ವ್ಯವಸ್ಥಿತ ಹಣಕಾಸು ಸಂಸ್ಥೆಗಳಿಂದ ಪಡೆಯುವಂತೆ ಮಾಡುವುದಾಗಿರುತ್ತದೆ.

ಬ್ಯಾಂಕ್‌ಗಳು ಬಡಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ಹಣಕಾಸು ನೆರವನ್ನು ನೀಡಲು ಶ್ರಮಿಸುತ್ತಿದ್ದರೂ ಸಹ, ಬ್ಯಾಂಕ್‌ಗಳ ಮೂಲಕ ಗ್ರಾಮೀಣ ಭಾಗದ ಎಲ್ಲಾ ವರ್ಗದ ಬಡಜನರನ್ನು ತಲುಪುವುದು ಕಷ್ಟವಾಗಿರುತ್ತದೆ. ಇದರಿಂದಾಗಿ ಗ್ರಾಮಾಂತರ ಪ್ರದೇಶದ ಅರ್ಹ ಜನತೆಗೆ ಹಣಕಾಸು ಸೌಲಭ್ಯ ಪೂರ್ಣ ಪ್ರಮಾಣದಲ್ಲಿ ಲಭ್ಯವಾಗುತ್ತಿಲ್ಲ. ಬ್ಯಾಂಕ್ ನಂತಹ ಹಣಕಾಸು ಸಂಸ್ಥೆಗಳು ಅತ್ಯಂತ ಹಿಂದುಳಿದ ಸೌಲಭ್ಯ ರಹಿತ ಗ್ರಾಮಗಳನ್ನು ತಲುಪಲು ದುಸ್ತರವಾಗಿದೆ.


ಈ ಕಾರಣದಿಂದಾಗಿ ಕೆಎಸ್ಆರ್ಎಲ್ಪಿಎಸ್ ಸಂಸ್ಥೆಯು ಹಣಕಾಸು ಸೇವೆಯನ್ನು ಬಡಜನರಿಗೆ ಒದಗಿಸಲು ಮತ್ತು ಅವರನ್ನು ಬಡತನದ ಪರಿಸ್ಥಿತಿಯಿಂದ ಹೊರತಂದು ಶಾಶ್ವತ ಅಭಿವೃದ್ಧಿ ಸಾಧಿಸುವ ಕಾರ್ಯದಲ್ಲಿ ಪ್ರವೃತ್ತವಾಗಿದೆ. ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಸಾಲ ಸೌಕರ್ಯ ಒದಗಿಸುವ ಕಾರ್ಯಕ್ರಮದ ಮುಖ್ಯ ಉದ್ದೇಶವು ಅದೇ ಆಗಿದ್ದು, ಸೆಪ್ಟೆಂಬರ್ ಮಾಹೆ 2015 ರ ಅಂತ್ಯದ ವೇಳೆಗೆ ಸುಮಾರು 6 ಲಕ್ಷ ಸ್ವ ಸಹಾಯ ಗುಂಪುಗಳ ಸದಸ್ಯರಿಗೆ ರೂ 6,700 ಕೋಟಿ ಸಾಲ ಸೌಲಭ್ಯ ದೊರಕಿಸಿ ಕೊಡಲಾಗಿದೆ.

**ಹಣಕಾಸು ಸೇರ್ಪಡೆ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡಿರುವ ಕಾರ್ಯತಂತ್ರಗಳು:**

**ರಾಜ್ಯ ಮಟ್ಟದಲ್ಲಿ ಸ್ವಸಹಾಯ ಗುಂಪುಗಳ ಸಂಬಂಧ ಕ್ರಿಯಾಶೀಲ ರಾಜ್ಯ ಮಟ್ಟದ ಬ್ಯಾಂಕರ್ಸ್ ಸಭೆ ನಡೆಸುವುದು:**

ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು–ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ, ನಿಗಧಿ ಪಡಿಸಿರುವಂತೆ ಪ್ರತಿ ಮೂರು ತಿಂಗಳಿಗೊಮ್ಮೆ ರಾಜ್ಯ ಮಟ್ಟದ ಬ್ಯಾಂಕರ್ಸ್ ಸಭೆಯನ್ನು ಪರಿಣಾಮಕಾರಿಯಾಗಿ ನಡೆಸಲಾಗುತ್ತಿದೆ. ಅಗತ್ಯ ಸಂದರ್ಭಗಳಲ್ಲಿ ಹೆಚ್ಚುವರಿ ಸಭೆಗಳನ್ನು ಸಹ ನಡೆಸಲಾಗುವುದು. ಇದರಿಂದಾಗಿ ಸಮಿತಿಯ ಸದಸ್ಯರುಗಳು ಹೆಚ್ಚಿನ ಮಾಹಿತಿಯೊಂದಿಗೆ ಬ್ಯಾಂಕ್‌ಗಳು ನಿಗಧಿತ ಗುರಿಯನ್ನು ಸಾಧಿಸಲು ಸಹಕಾರ ನೀಡಬಹುದಾಗಿದೆ. ಬ್ಯಾಂಕ್‌ಗಳ ಕಾರ್ಯ ಪ್ರವೃತ್ತಿ ಮತ್ತು ಗುಣಮಟ್ಟವನ್ನು ಅಳೆಯಲು, ಪ್ರಗತಿ ಪರಿಶೀಲನೆ ನಡೆಸಿ ಅವಶ್ಯ ಕಾರ್ಯತಂತ್ರ ರೂಪಿಸಲು ಅಳವಡಿಸಿಕೊಳ್ಳಲು ಎಸ್ಎಲ್ಬಿಸಿ ಉತ್ತಮ ವೇದಿಕೆಯಾಗಿದೆ.

## ಬ್ಯಾಂಕ್ ಸಾಲ ಸಂಪರ್ಕ ಮಾಸಾಚರಣೆ:




ಬ್ಯಾಂಕ್ ಸಾಲ ಸಂಪರ್ಕ ಮಾಸಾಚರಣೆಯನ್ನು ಪ್ರಸಕ್ತ ಸಾಲಿನಲ್ಲಿ ಎರಡು ಭಾರಿ ಆಚರಿಸಲಾಗಿದೆ, ಆ ಮಾಸಗಳೆಂದರೆ ಆಗಸ್ಟ್ 2014 ಮತ್ತು ಜನವರಿ 2015. ಈ ಮಾಸಗಳಲ್ಲಿ ಬ್ಯಾಂಕ್‌ಗಳು ಸ್ವ ಸಹಾಯ ಗುಂಪಿನ ಸದಸ್ಯರಿಗೆ ಹೆಚ್ಚಿನ ಮಟ್ಟದಲ್ಲಿ ಸಾಲ ಸಂಪರ್ಕ ಕಲ್ಪಿಸಲಾಗಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಸ್ವ ಸಹಾಯ ಗುಂಪುಗಳ ಸದಸ್ಯರಿಗೆ ಸಾಲ ನೀಡಲು ಬ್ಯಾಂಕ್‌ಗಳ ವತಿಯಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುತ್ತದೆ. ಜನವರಿ ಮಾಹೆ 2015ರ ಅಂತ್ಯಕ್ಕೆ ಒಟ್ಟು 9657 ಸ್ವ ಸಹಾಯ ಗುಂಪುಗಳಿಗೆ ಒಟ್ಟು ರೂ 259 ಕೋಟಿ ಸಾಲ ಸೌಲಭ್ಯ ನೀಡಲಾಗಿದೆ. ಮೊದಲ ಬಾರಿಗೆ ಬ್ಯಾಂಕ್‌ವಾರು ಸಾಲ ಪಡೆದಿರುವ ಸ್ವ ಸಹಾಯ ಗುಂಪುಗಳು ಮತ್ತು ಸಾಲ ಸೌಲಭ್ಯ ಪಡೆದಿರದ ಸ್ವ ಸಹಾಯ ಗುಂಪುಗಳು ಎಂಬುವುದಾಗಿ ವಿಂಗಡಿಸಿ, ಎಸ್‌ಎಲ್‌ಬಿಸಿಗೆ ವರದಿ ನೀಡಲಾಗಿದೆ. ಈ ಮಾಹಿತಿಯಿಂದಾಗಿ ಸಾಲ ಪಡೆಯಲು ಅರ್ಹವಿರುವ ಸ್ವ ಸಹಾಯ ಗುಂಪುಗಳ ಪಟ್ಟಿಯನ್ನು ತಯಾರಿಸಿ ಸದರಿ ಬ್ಯಾಂಕ್‌ಗಳು ಸ್ವ ಸಹಾಯ ಗುಂಪುಗಳಿಗೆ ಸಾಲ ಸೌಲಭ್ಯ ಕಲ್ಪಿಸಲು ಎಸ್‌ಎಲ್‌ಬಿಸಿ ಮೂಲಕ ತಿಳಿಸಲಾಗಿದೆ. ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಅದ್ಯಕ್ಷರುಗಳಿಗೆ ವೈಯಕ್ತಿಕವಾಗಿ ಅಪರ ಮುಖ್ಯ ಕಾರ್ಯದರ್ಶಿಗಳು/ಅದ್ಯಕ್ಷರು ಎಸ್‌ಎಲ್‌ಬಿಸಿ ರವರು ಪತ್ರದ ಮೂಲಕ, ಬ್ಯಾಂಕ್ ಲಿಂಕೇಜ್ ಹೆಚ್ಚಿಸಲು ಉದ್ದೇಶಿಸಿರುವ ಮಾಸಾಚರಣೆಗೆ, ಅಗತ್ಯ ಸಹಕಾರ ನೀಡುವಂತೆ ಕೋರಿರುತ್ತಾರೆ. ಈ ನಿಟ್ಟಿನಲ್ಲಿ ಬ್ಯಾಂಕ್‌ಗಳು ಉತ್ತಮ ಸಹಕಾರ ನೀಡಿರುತ್ತವೆ. ಈ ಕಾರಣದಿಂದಾಗಿ ಸ್ವಸಹಾಯ ಗುಂಪುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸಾಲ ಸೌಲಭ್ಯ ನೀಡಲು ಸಾಧ್ಯವಾಗಿದೆ.

## ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಬ್ಯಾಂಕ್‌ರ್ಸ್ ಸಮಿತಿ ಸಭೆಯ ರಚನೆ:

ಜಿಲ್ಲಾ ಮಟ್ಟದಲ್ಲಿ **'ಜಿಲ್ಲಾ ಮಟ್ಟದ ಸಾಲ ಸಮಿತಿ'** ಮತ್ತು ತಾಲ್ಲೂಕು ಮಟ್ಟದಲ್ಲಿ **'ತಾಲ್ಲೂಕು ಮಟ್ಟದ ಬ್ಯಾಂಕರ್ಸ್ ಸಮಿತಿ ಸಭೆ'**ಗಳನ್ನು ನಡೆಸುವುದರ ಮೂಲಕ, ಬ್ಯಾಂಕ್ ಸಾಲ ನೀಡಿಕೆ, ಮರುಪಾವತಿಯಲ್ಲಿನ ತೊಡಕುಗಳನ್ನು ಕುರಿತು ಮಾಹಿತಿಯನ್ನು ನಿಯಮಿತವಾಗಿ ವಿನಿಮಯ ಮಾಡಿಕೊಂಡು ಉತ್ತಮ ಪ್ರಗತಿ ಸಾಧಿಸಲು ಸಾಧ್ಯವಾಗಿರುತ್ತದೆ.

## ಲೀಡ್ ಡಿಸ್ಟ್ರಿಕ್ಟ್ ಮ್ಯಾನೇಜರ್ಸ್ ಸಭೆ:

ರಾಜ್ಯ ಮಟ್ಟದಲ್ಲಿ ಎಲ್‌ಡಿಎಮ್ಸ್‌ಗಳ ಸಭೆಯನ್ನು ನಡೆಸಲಾಗಿದ್ದು, ನಿಯಮಿತವಾಗಿ ಜಿಲ್ಲಾ ಮಟ್ಟದಲ್ಲಿ ಡಿಎಲ್‌ಬಿಸಿ ಮತ್ತು ತಾಲ್ಲೂಕು ಮಟ್ಟದಲ್ಲಿ ಬಿಎಲ್‌ಬಿಸಿ ಸಭೆಗಳನ್ನು ಪರಿಣಾಮಕಾರಿಯಾಗಿ ನಡೆಸಲಾಗುತ್ತಿದೆ. ಎಸ್‌ಎಚ್‌ಜಿ ಬ್ಯಾಂಕ್ ಲಿಂಕೇಜ್ ಮತ್ತು ಬಡ್ಡಿ ಸಹಾಯ ಧನ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಲ್ಲಿ ಅವರುಗಳ ಭಾಗವಹಿಸುವಿಕೆ ಕುರಿತು ಚರ್ಚಿಸಲಾಗಿರುತ್ತದೆ. ಎಸ್‌ಎಚ್‌ಜಿ ಬ್ಯಾಂಕ್ ಲಿಕೇಂಜ್‌ನಲ್ಲಿ ಗುರಿಯನ್ನು ಸಾಧಿಸಲು ಅವರುಗಳ ಕಾರ್ಯ ಮತ್ತು ಪ್ರಗತಿಯನ್ನು ಪಟ್ಟಿ ಮಾಡಿ ನೀಡಲಾಗಿರುತ್ತದೆ.

## ಸರ್ಕಾರೇತರ ಸಂಸ್ಥೆಗಳೊಂದಿಗೆ ಸಭೆ ನಡೆಸುವುದು:

ಎಸ್‌ಎಚ್‌ಜಿ ಬ್ಯಾಂಕ್ ಲಿಂಕೇಜ್ ಮತ್ತು ಬಡ್ಡಿ ಸಹಾಯಧನ ಸೌಲಭ್ಯದ ಕುರಿತಾದ ಗುರಿ ಸಾಧನೆಯಲ್ಲಿ ಎನ್‌ಜಿಓಗಳ ಸಹಕಾರ ಕುರಿತು ಎರಡು ಸಭೆಗಳನ್ನು ನಡೆಸಲಾಗಿರುತ್ತದೆ. ಮುಂದುವರೆದು ಎನ್‌ಜಿಓ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಎಸ್‌ಕೆಡಿಆರ್‌ಡಿಪಿ ಸಂಸ್ಥೆಯೊಂದಿಗೆ ಮೂರು ಸಭೆಗಳನ್ನು ನಡೆಸಲಾಗಿರುತ್ತದೆ. ಈ ಸಭೆಗಳಲ್ಲಿ, ಕ್ಷೇತ್ರಮಟ್ಟದಲ್ಲಿ ಸ್ವಸಹಾಯ ಗುಂಪುಗಳ ರಚನೆ, ಬ್ಯಾಂಕ್ ಸಂಪರ್ಕ ಮತ್ತು ಬಡ್ಡಿ ಸಹಾಯಧನ ಸೌಲಭ್ಯಗಳ ಯಶಸ್ವಿ ಅನುಷ್ಠಾನ ಕುರಿತು ಚರ್ಚಿಸಲಾಗಿರುತ್ತದೆ. ಎನ್‌ಜಿಓಗಳು ಮತ್ತು ಎಸ್‌ಕೆಡಿಆರ್‌ಡಿಪಿ ಸಂಸ್ಥೆಗಳು ಎಸ್‌ಎಚ್‌ಜಿ ಬ್ಯಾಂಕ್ ಲಿಂಕೇಜ್ ರಂಗದಲ್ಲಿ ಮುಖ್ಯ ಪಾತ್ರವನ್ನು ನಿರ್ವಹಿಸುತ್ತಿವೆ. ಎಸ್‌ಕೆಡಿಆರ್‌ಡಿಪಿ ಸಂಸ್ಥೆಯು ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್‌ಗಳಿಂದಲೇ ನೇರವಾಗಿ ಸಾಲ ಒದಗಿಸುವ ಪ್ರಕ್ರಿಯೆಗೆ ಚಾಲನೆ ನೀಡುತ್ತಿದೆ. ಇದರಿಂದಾಗಿ ಆ ಸ್ವಸಹಾಯ ಗುಂಪುಗಳಿಗೆ ಬಡ್ಡಿ ಸಹಾಯಧನ ಸೌಲಭ್ಯವು ದೊರೆತಂತಾಗಿದೆ.

**<u>ಖಾಸಗಿ ಬ್ಯಾಂಕ್‌ಗಳೊಂದಿಗಿನ ಸಭೆ:</u>**


ಖಾಸಗಿ ಬ್ಯಾಂಕ್‌ಗಳೊಂದಿಗೆ ಒಂದು ಸಭೆಯನ್ನು ನಡೆಸಲಾಗಿದ್ದು, ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಸಂಪರ್ಕ ಕಲ್ಪಿಸಲು ಮತ್ತು ಬಡ್ಡಿ ಸಹಾಯಧನ ಸೌಲಭ್ಯವನ್ನು ಉಪಯೋಗಿಸಿಕೊಳ್ಳುವಂತೆ ಸಹಕಾರ ಕೋರಲಾಗಿರುತ್ತದೆ. ಈ ಕ್ರಮದಿಂದಾಗಿ ಈವರೆಗೆ ಒಟ್ಟು 7 ಬ್ಯಾಂಕ್‌ಗಳು ರೂ.388 ಕೋಟಿ ಸಾಲವನ್ನು ಸ್ವ ಸಹಾಯ ಗುಂಪುಗಳಿಗೆ ಮಂಜೂರು ಮಾಡಿವೆ.

**<u>ಸ್ವಸಹಾಯ ಗುಂಪುಗಳಿಗೆ ಸುತ್ತುನಿಧಿಯ ಹಂಚಿಕೆ:</u>**

ಸುತ್ತುನಿಧಿ ಎಂಬುವುದು ಒಮ್ಮೆ ಮಾತ್ರ ಯೋಜನೆಯ ವತಿಯಿಂದ ಸ್ವ ಸಹಾಯ ಗುಂಪುಗಳಿಗೆ ನೀಡುವ ಅನುದಾನವಾಗಿದೆ. ಈ ಅನುದಾನದ ಮೊತ್ತವು ಸ್ವ ಸಹಾಯ ಗುಂಪಿನಲ್ಲಿ ಸದಸ್ಯರ ಉಳಿತಾಯದ ಹಣದೊಂದಿಗೆ ಸೇರಿ, ಒಟ್ಟು ಬಂಡವಾಳನ್ನು ಹೆಚ್ಚಿಸುವುದು ಮತ್ತು ಸ್ವ ಸಹಾಯ ಗುಂಪುಗಳು ಹೆಚ್ಚಿನ ಪ್ರಮಾಣದಲ್ಲಿ ಬ್ಯಾಂಕ್‌ಗಳಿಂದ ಸಾಲ ಪಡೆಯಲು ಅನುಕೂಲವಾಗಿದೆ. ಅಲ್ಲದೇ ಸ್ವ ಸಹಾಯ ಗುಂಪಿನ ಸದಸ್ಯರ ಸಾಲ ಮರುಪಾವತಿ ಶಿಸ್ತನ್ನು ರೂಪಿಸಿ, ಬ್ಯಾಂಕ್‌ಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಸಾಲ ಪಡೆಯಲು ಸಹಕಾರಿಯಾಗಿದೆ. ಅರ್ಹ ಸ್ವ ಸಹಾಯ ಗುಂಪುಗಳನ್ನು ಗುರುತಿಸಲು ಜಿಲ್ಲೆಗಳಿಗೆ ಗುರಿಯನ್ನು ನಿಗಧಿ ಪಡಿಸಲಾಗುತ್ತದೆ. ಯೋಜನಾ ಮಾರ್ಗಸೂಚಿಯಂತೆ ಆಯ್ಕೆ ಮಾಡಿ ಸಲ್ಲಿಸಲಾದ ಪ್ರಸ್ತಾವನೆಯಲ್ಲಿನ ಸ್ವಸಹಾಯ ಗುಂಪುಗಳಿಗೆ ಸುತ್ತುನಿಧಿಯನ್ನು ನೀಡಲಾಗುತ್ತಿದೆ.

**<u>ಸಮುದಾಯ ಬಂಡವಾಳ ನಿಧಿ(ಸಿ.ಐ.ಎಫ್):</u>**

ಸಂಜೀವಿನಿಯು ಒಕ್ಕೂಟಗಳಿಗೆ ಸಮುದಾಯ ಬಂಡವಾಳ ನಿಧಿ ಅನುದಾನವನ್ನು ನೀಡುತ್ತಿದ್ದು, ಇದು ಒಕ್ಕೂಟಗಳ ಸದಸ್ಯರು ತಯಾರಿಸುವ ಕಿರು ಬಂಡವಾಳ ಹೂಡಿಕೆ ಯೋಜನೆಯನ್ನು ಆಧರಿಸಿದೆ. ಹೀಗೆ ನೀಡಲಾಗುವ ಸಮುದಾಯ ಬಂಡವಾಳ ನಿಧಿಯನ್ನು ಒಕ್ಕೂಟಗಳು ಸ್ವ ಸಹಾಯ ಸಂಘಗಳಿಗೆ ಸಾಲ ರೂಪದಲ್ಲಿ ನೀಡುತ್ತವೆ. ಸ್ವ ಸಹಾಯ ಗಂಪುಗಳು ಸದಸ್ಯರಿಗೆ ಸಾಲ ನೀಡುತ್ತವೆ. ಈ ರೀತಿ ಪಡೆದ ಸಾಲವನ್ನು ಸ್ವ ಸಹಾಯ ಗುಂಪಿನ ಸದಸ್ಯರು ಸ್ವ/ಕುಟುಂಬದ ಪೋಷಣೆ ಮತ್ತು ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ತೊಡಗಿಸಿಕೊಳ್ಳುವರು. ರಾಜ್ಯದಲ್ಲಿ ಮೊದಲ ಬಾರಿಗೆ ವಾರ್ಡ್/ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳು ಮತ್ತು ಸಮುದಾಯ ಬಂಡವಾಳ ನಿಧಿ(ಸಿ.ಐ.ಎಫ್) ಕಲ್ಪನೆಯನ್ನು ಸಂಜೀವಿನಿ ಸಂಸ್ಥೆಯು ಪರಿಚಯಿಸಿದೆ.




2015–16ನೇ ಸಾಲಿನಲ್ಲಿ ಒಟ್ಟು ರೂ.34.84 ಕೋಟಿ ಸಮುದಾಯ ಬಂಡವಾಳ ನಿಧಿ ನೀಡುವ ಗುರಿಯನ್ನು ಹೊಂದಿದ್ದು, ಈವರೆಗೆ ರೂ.20.15 ಕೋಟಿ ಸಿ.ಐ.ಎಫ್‌ನ್ನು ಮಂಜೂರು ಮಾಡಲಾಗಿದೆ. 2014–15ನೇ ಸಾಲಿನಲ್ಲಿ ಪಡೆದಿರುವ ಸಮುದಾಯ ಬಂಡವಾಳ ನಿಧಿಯನ್ನು ಸ್ವಸಹಾಯ ಗುಂಪಿನ ಸದಸ್ಯರು ಪಡೆದಿರುವ ಸಾಲದಲ್ಲಿ ಶೇ.47ನ್ನು ಪಶುಸಂಗೋಪನೆ, ಶೇ.31ನ್ನು ಕಿರು ಉದ್ದಿಮೆ, ಶೇ.12ನ್ನು ಕೃಷಿ ಮತ್ತು ಶೇ.7ನ್ನು ಮನೆ ನಿರ್ವಹಣೆ ಮತ್ತು ಪೋಷಣೆಯ ಉದ್ದೇಶಕ್ಕಾಗಿ ಪಡೆದಿರುತ್ತಾರೆ. ಈ ಕುರಿತು 2014–15ನೇ ಸಾಲಿನ ಸಿ.ಐ.ಎಫ್ ಮಂಜೂರಾತಿಯ ಪರಿಣಾಮದ ಬಗೆಗೆ ಮೌಲ್ಯಮಾಪನ ನಡೆಸಲಾಗಿದ್ದು, ಅದರಂತೆ ನೀಡಲಾದ ರೂ 8.12 ಕೋಟಿ ಸಿ.ಐ.ಎಫ್‌ನಲ್ಲಿ ರೂ.2.66 ಕೋಟಿ ಸಮುದಾಯ ಬಂಡವಾಳ ನಿದಿ ಮೊತ್ತವು ಸ್ವಸಹಾಯ ಗುಂಪುಗಳಿಗೆ ಸಾಲ ಪಡೆದ ಸದಸ್ಯರಿಂದ ಮರುಪಾವತಿಯಾಗಿರುತ್ತದೆ. ಸಮುದಾಯ ಬಂಡವಾಳ ನಿದಿಮೊತ್ತವು ಗ್ರಾಮೀಣ ಬಡಜನರ ಜೀವನೋಪಾಯ ಚಟುವಟಿಕೆ ರಂಗದಲ್ಲಿ ಉತ್ತಮ ಫಲಿತಾಂಶ ನೀಡಿದ್ದು, ವಿವರ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

| ಜಿಲ್ಲೆ | ಪ್ರಥಮವಾಗಿ ವಿತರಿಸಿದ ಸಾಲ(ರೂ. ಲಕ್ಷಗಳಲ್ಲಿ) | ಮರುಪಾವತಿ (ರೂ. ಲಕ್ಷಗಳಲ್ಲಿ) | ಹೊಸ ಸಾಲ(ರೂ. ಲಕ್ಷಗಳಲ್ಲಿ) | ವಸೂಲಾತಿ ಸಾಲ (ಶೇ) | ಮರುಪಾವತಿಯಾದ ಹಣದಲ್ಲಿ ಹೊಸದಾಗಿ ನೀಡಲ್ಪಟ್ಟ ಸಾಲ(ಶೇ) |
|---|---|---|---|---|---|
| ತುಮಕೂರು | 170.8 | 43.08 | 7.94 | 25% | 18% |
| ಗದಗ | 203.8 | 33.77 | 25.07 | 17% | 74% |
| ಕೊಪ್ಪಳ | 139.8 | 62.71 | 62.06 | 45% | 99% |
| ಉತ್ತರ ಕನ್ನಡ | 142.25 | 39 | 3.95 | 27% | 10% |
| ಮೈಸೂರು | 155.65 | 88.05 | 34 | 57% | 39% |
| **ಒಟ್ಟು** | **812.3** | **266.61** | **133.02** | **33%** | **50%** |

**ಬಡ್ಡಿ ಸಹಾಯಧನ:**

ಗ್ರಾಮೀಣ ಪ್ರದೇಶದ ಸ್ವಸಹಾಯ ಗುಂಪುಗಳ ಸದಸ್ಯರಿಗೆ ಅವಶ್ಯ ಸಾಲ ಸೌಲಭ್ಯ ವ್ಯವಸ್ಥೆಯನ್ನು ಕಡಿಮೆ ಬಡ್ಡಿಯ ದರದಲ್ಲಿ ನೀಡುವುದು ಅವಶ್ಯಕ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಗೌರವಾನ್ವಿತ ಹಣಕಾಸು ಸಚಿವರು ತಮ್ಮ 2013–14ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರೂ.3 ಲಕ್ಷದ ವರೆಗೆ ಸಾಲ ಪಡೆಯುವ ಸ್ವ ಸಹಾಯ ಗುಂಪುಗಳ ಸದಸ್ಯರುಗಳಿಗೆ ವಾರ್ಷಿಕ ಶೇ.7ರ ಬಡ್ಡಿ ದರದಲ್ಲಿ ಸಾಲ ದೊರೆಯುವಂತೆ ಬಡ್ಡಿ ಸಹಾಯಧನ ಯೋಜನೆಯನ್ನು ಘೋಷಿಸಿರುತ್ತಾರೆ. ನಿಗಧಿತ ಸಮಯದಲ್ಲಿ ಸಾಲವನ್ನು ಮರುಪಾವತಿಸುವ ಮಹಿಳಾ ಸ್ವ ಸಹಾಯ ಗುಂಪುಗಳಿಗೆ ಶೇ.3 ರಷ್ಟು ಹೆಚ್ಚಿನ ಬಡ್ಡಿ ಸಹಾಯ ಧನವನ್ನು ನಿಡಲಾಗುತ್ತಿದೆ.

ಬಡ್ಡಿ ಸಹಾಯಧನ ಯೋಜನೆಯಲ್ಲಿ ಜಿಲ್ಲೆಗಳನ್ನು ಎರಡು ವಿಧಗಳಾಗಿ ವಿಂಗಡಿಸಲಾಗಿದೆ. ವರ್ಗ–1ರಲ್ಲಿ ದೇಶದ 150 ಜಿಲ್ಲೆಗಳು ಸೇರಿದ್ದು, ಕರ್ನಾಟಕದ ತುಮಕೂರು, ಮೈಸೂರು, ಕೊಪ್ಪಳ ಮತ್ತು ಗದಗ ಈ ವರ್ಗಕ್ಕೆ ಸೇರಿವೆ. ವರ್ಗ–1ರ ಜಿಲ್ಲೆಗಳಲ್ಲಿರುವ ಎಲ್ಲಾ ಮಹಿಳಾ ಸ್ವಸಹಾಯ ಗುಂಪುಗಳಿಗೆ ಈಗಾಗಲೇ ತಿಳಿಸಿರುವಂತೆ ಶೇ.7ರ ಬಡ್ಡಿದರದಲ್ಲಿ ಸಾಲ ನೀಡುವುದು ಕಡ್ಡಾಯವಾಗಿರುತ್ತದೆ. ಈ ಸ್ವಸಹಾಯ ಗುಂಪುಗಳು ನಿಗಧಿತ ಅವಧಿಯಲ್ಲಿ ಸಾಲಮರುಪಾವತಿ ಮಾಡಿದ್ದಲ್ಲಿ ಹೆಚ್ಚುವರಿಯಾಗಿ ಶೇ.3ರ ಹೆಚ್ಚಿವರಿ ಬಡ್ಡಿ ಸಹಾಯಧನ ಪಡೆಯುವುದರಿಂದ ಒಟ್ಟಾರೆ ಶೇ.4ರ ಬಡ್ಡಿದರದಲ್ಲಿ ಸಾಲ ಸೌಲಭ್ಯವನ್ನು ನೀಡಿದಂತಾಗುತ್ತದೆ.

ಕರ್ನಾಟಕದ ಉಳಿದ 26 ಜಿಲ್ಲೆಗಳು ವರ್ಗ–2ಕ್ಕೆ ಸೇರಿದ್ದು, ಈ ಜಿಲ್ಲೆಗಳಲ್ಲಿನ ಎನ್‌ಆರ್‌ಎಲ್‌ಎಮ್ ವಿಧೇಯ ಮಹಿಳಾ ಸ್ವಸಹಾಯ ಗುಂಪುಗಳು ಶೇ.5.5 ರಷ್ಟು ಬಡ್ಡಿ ಸಹಾಯಧನ ಪಡೆಯಲು ಅರ್ಹವಾಗಿರುತ್ತವೆ. ಈ ಬಡ್ಡಿ ಸಹಾಯಧನದ ಮೊತ್ತವನ್ನು ಪೂರ್ಣಪ್ರಮಾಣದಲ್ಲಿ ಕೇಂದ್ರ ಸರ್ಕಾರವು ಪಾವತಿಸುತ್ತದೆ. ಈ ಜಿಲ್ಲೆಗಳಲ್ಲಿ ಪ್ರಮಾಣಿಕವಾಗಿ ನಿಗಧಿತ ಸಮಯದಲ್ಲಿ ಸಾಲ ಮರುಪಾವತಿ ಮಾಡುವ ಸ್ವಸಹಾಯ ಗುಂಪುಗಳಿಗೆ ಕರ್ನಾಟಕ ಸರ್ಕಾರವು ಶೇ.3 ರಷ್ಟು ಹೆಚ್ಚುವರಿ ಬಡ್ಡಿಸಹಾಯಧನವನ್ನು ಪಾವತಿ ಮಾಡುತ್ತಿದೆ. ಇದರಿಂದಾಗಿ ಈ ಜಿಲ್ಲೆಗಳ ಎನ್‌ಆರ್‌ಎಲ್‌ಎಮ್ ವಿಧೇಯ ಮಹಿಳಾ ಸ್ವ ಸಹಾಯ ಗುಂಪುಗಳು ಶೇ.8.5 ರಷ್ಟು ಬಡ್ಡಿ ಸಹಾಯಧನವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವತಿಯಿಂದ ಪಡೆಯುತ್ತಿವೆ.

ಕರ್ನಾಟಕವು 2014–15ನೇ ಸಾಲಿನಲ್ಲಿ ಬಡ್ಡಿ ಸಹಾಯಧನ ಪಾವತಿಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುತ್ತದೆ. ವರ್ಗ–2ರ ಜಿಲ್ಲೆಗಳಲ್ಲಿನ ಎನ್‌ಆರ್‌ಎಲ್‌ಎಮ್ ವಿಧೇಯ ಸ್ವಸಹಾಯ ಗುಂಪುಗಳಲ್ಲಿ ಶೇ.96 ರಷ್ಟು ಬಡ್ಡಿ ಸಹಾಯಧನದ ಪ್ರಗತಿ ಸಾಧಿಸಲಾಗಿದೆ. ಬಡ್ಡಿ ಸಹಾಯಧನ ಪಾವತಿ ಸಂಬಂಧ ಬ್ಯಾಂಕ್‌ಗಳ ತತ್ರಾಂಶ ತಜ್ಞರು, ರಾಷ್ಟ್ರೀಯ ಅಭಿಯಾನ ನಿರ್ವಹಣಾ ಘಟಕ ಮತ್ತು ಸರ್ಪ್ ಸಂಸ್ಥೆಯೊಂದಿಗೆ ಸಭೆಗಳನ್ನು ನಡೆಸಿ ಯೋಜನೆಯ ಅನುಷ್ಠಾನದಲ್ಲಿ ಉಂಟಾದ ತಾಂತ್ರಿಕ ತೊಡಕುಗಳನ್ನು ನಿವಾರಿಸಿಕೊಂಡು ಬಡ್ಡಿ ಸಹಾಯಧನ ಯೋಜನೆಯನ್ನು ಅತ್ಯುತ್ತಮವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

2015–16ರ ಆರ್ಥಿಕ ಸೇರ್ಪಡೆಯ ಸಾಧನೆಯ ವಿವರಗಳನ್ನು ಕೋಷ್ಟಕದಲ್ಲಿ ನೀಡಲಾಗಿದೆ.

(ರೂ. ಲಕ್ಷಗಳಲ್ಲಿ)

| ಘಟಕ | 2015-16 | | | |
|---|---|---|---|---|
| | ಗುರಿ | | ಸಾಧನೆ | |
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಸುತ್ತುನಿಧಿ | 4116 | 61 | | |
| ಸಮುದಾಯ ಬಂಡವಾಳ ನಿಧಿ | 3140 | 3484 | 1612 | 2015 |
| ಬಡ್ಡಿ ಸಹಾಯಧನ | | 819 | 106547 | 1162 |
| ಸ್ವಸಹಾಯ ಗುಂಪುಗಳ ಬ್ಯಾಂಕ್‌ಲಿಂಕೇಜ್ | 156250 | 2500 | 140937 | 2217 |

**2015–16ನೇ ಸಾಲಿನ ಆರ್ಥಿಕ ವೆಚ್ಚದ ವಿವರ:**

(ರೂ.ಲಕ್ಷಗಳಲ್ಲಿ)

| | | |
|---|---|---|
| 2015–16 | ಆಡಳಿತಾತ್ಮಕ ವೆಚ್ಚ | 262 |
| | ಕ್ಷೇತ್ರ ಭೇಟಿ | 16 |
| | ಇತರೆ ವೆಚ್ಚ | 4,775 |
| | **2015–16ನೇ ಸಾಲಿನ ಒಟ್ಟು ವೆಚ್ಚ** | 5,053 |

(ರೂ.ಕೋಟಿಗಳಲ್ಲಿ)

| ವರ್ಷ | ವಿವರ | [illegible] | [illegible] | [illegible] | [illegible] | [illegible] | [illegible] | [illegible] | [illegible] | KCNM | ಒಟ್ಟು |
|---|---|---|---|---|---|---|---|---|---|---|---|
| 2015–16 | ಆಡಳಿತಾತ್ಮಕ ವೆಚ್ಚ | 204.53 | 34.08 | - | - | - | - | 9.33 | 13.90 | - | 261.85 |
| | ಕ್ಷೇತ್ರ ಭೇಟಿ | 10.98 | 5.08 | - | - | - | - | - | 0.05 | - | 16.11 |
| | ಇತರೆ ವೆಚ್ಚ | 1,268.50 | 1,004.54 | 0.00 | 1,141.59 | - | 17.54 | - | 1,260.01 | 83.13 | 4,775.31 |
| | ಒಟ್ಟು ವೆಚ್ಚ | **1,484.01** | **1,043.70** | **0.00** | **1,141.59** | **-** | **17.54** | **9.33** | **1,273.96** | **83.13** | **5,053.27** |

## ರಾಜೀವ್ ಗಾಂಧಿ ಚೈತನ್ಯ ಯೋಜನೆ:

ರಾಜೀವ್ ಗಾಂಧಿ ಚೈತನ್ಯ ಯೋಜನೆಯು ರಾಜ್ಯ ಸರ್ಕಾರದ ಯೋಜನೆಯಾಗಿದ್ದು, 2013–14ನೇ ಸಾಲಿನಿಂದ ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿದೆ. 2014–15ನೇ ಸಾಲಿನಲ್ಲಿ 18 ರಿಂದ 35 ವರ್ಷದ ವರೆಗಿನ 8ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುವ ನಿರುದ್ಯೋಗಿ ಯುವ ಜನರನ್ನು ಪ್ರತಿ ಗ್ರಾಮ ಪಂಚಾಯತಿಗೆ 40 ರಂತೆ ರಾಜ್ಯದಲ್ಲಿ ಒಟ್ಟು 2 ಲಕ್ಷ ಯುವ ಜನರನ್ನು ಆಯ್ಕೆಮಾಡಲು ಉದ್ದೇಶಿಸಲಾಗಿತ್ತು. ಅದರಲ್ಲಿ 1 ಲಕ್ಷ ಗ್ರಾಮೀಣ ನಿರುದ್ಯೋಗಿ ಯುವಜನತೆಗೆ ಸ್ವ–ಉದ್ಯೋಗ ಹಾಗೂ 1 ಲಕ್ಷ ನಿರುದ್ಯೋಗಿ ಯುವಜನತೆಗೆ ವೃತ್ತಿಪರ ಕೌಶಲ್ಯದೊಂದಿಗೆ ಉದ್ಯೋಗ ಕಲ್ಪಿಸುವ ಗುರಿ ಹೊಂದಲಾಗಿತ್ತು.

ಅಭ್ಯರ್ಥಿಗಳ ಆಯ್ಕೆಯಲ್ಲಿ ಸರ್ಕಾರದ ಮೀಸಲಾತಿ ನಿಯಮಾವಳಿಗಳಂತೆ ಕನಿಷ್ಠ ಶೇ.20% ಪರಿಶಿಷ್ಠ ಜಾತಿ ಹಾಗು ಶೇ.9% ಪರಿಶಿಷ್ಠ ಪಂಗಡದ ಯುವಜನರನ್ನು ಆಯ್ಕೆ ಮಾಡಿಕೊಳ್ಳುವುದು, ಮಹಿಳೆಯರಿಗೆ ಮತ್ತು ಅಲ್ಪಸಂಖ್ಯಾತರಿಗೆ ಆದ್ಯತೆ ನೀಡಲಾಗುವುದು ಹಾಗೂ ವಿಕಲಚೇತನರು, ಬುಡಕಟ್ಟು ಜನಾಂಗದ ಯುವಜನರು, ಲೈಂಗಿಕ ಶೋಷಣೆಗೊಳಗಾದ ಮಹಿಳೆಯರು, ವಿಧವೆಯರು, ಪರಿತ್ಯಕ್ತ ಮಹಿಳೆಯರು, ಮಂಗಳಮುಖಿಯರು (ಟ್ರಾನ್ಸ್‌ಜೆಂಡರ್), ಬಿಡುಗಡೆಗೊಂಡ ಎಲ್ಲಾ ಜೀತ ವಿಮುಕ್ತರು, ಎಂಜಿಎನ್‌ಆರ್‌ಇಜಿಎ ಯಡಿ 100 ದಿನ ಉದ್ಯೋಗ ಪೂರೈಸಿದ ಯುವಜನರು ಇವರುಗಳನ್ನು ಸ್ವಯಂ ಸೇರ್ಪಡೆ (Auto inclusion) ಹೊಂದುವುದು. ಇವರಿಗೆ ಗ್ರಾಮ ಸಭೆಯ ಆಯ್ಕೆ ಕಡ್ಡಾಯವಾಗಿರುವುದಿಲ್ಲ.

2015–16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ, ಸ್ವ–ಉದ್ಯೋಗ ಮತ್ತು ಕೌಶಲ್ಯಾಭಿವೃದ್ದಿ ಉದ್ಯೋಗ ಕಲ್ಪಿಸುವಿಕೆಗಾಗಿ ಪ್ರತಿ ಗ್ರಾಮ ಪಂಚಾಯತಿಗೆ 50ರಂತೆ (25+25) ಯುವಕ/ಯುವತಿಯರನ್ನು ಆಯ್ಕೆ ಮಾಡಲು ಗುರಿ ನಿಗಧಿಪಡಿಸಲಾಗಿದೆ.

ಅದರಂತೆ ಹಿಂದಿನ ವರ್ಷದ ಸ್ವ–ಉದ್ಯೋಗದಡಿ ಬಾಕಿ ಇರುವ ಅರ್ಜಿಗಳು ಸೇರಿ 2015–16ನೇ ಸಾಲಿಗೆ ಒಟ್ಟು ಗುರಿ 327745 ಆಗಿದ್ದು, ಡಿಸೆಂಬರ್ 2015ರ ಮಾಹೆಯ ಅಂತ್ಯಕ್ಕೆ 26549 ಅಭ್ಯರ್ಥಿಗಳ ಅರ್ಜಿಗಳನ್ನು ಸಾಲ ಮಂಜೂರಾತಿಗಾಗಿ ವಿವಿಧ ಬ್ಯಾಂಕುಗಳಿಗೆ ಸಲ್ಲಿಸಲಾಗಿದ್ದು, ಅದರಲ್ಲಿ 11116 ಫಲಾನುಭವಿಗಳಿಗೆ ಸಾಲ ಮಂಜೂರಾಗಿರುತ್ತದೆ. ಕೌಶಲ್ಯಾಭಿವೃದ್ದಿ ವೃತ್ತಿ ತರಬೇತಿ ಆಧಾರಿತ ಉದ್ಯೋಗಕ್ಕೆ ಸಂಬಂಧಿಸಿದಂತೆ 2029 ಫಲಾನುಭವಿಗಳಿಗೆ ತರಬೇತಿ ನೀಡಿ ಉದ್ಯೋಗ ಕಲ್ಪಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ – 3ರಲ್ಲಿ ನೀಡಲಾಗಿದೆ.

ಆಯ್ಕೆಯಾದ ಫಲಾನುಭವಿಗಳಿಗೆ ಸ್ವ–ಉದ್ಯೋಗ ಮತ್ತು ಕೌಶಲ್ಯಾಭಿವೃದ್ದಿ ವೃತ್ತಿ ತರಬೇತಿ ಆಧಾರಿತ ಉದ್ಯೋಗಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡಲಾಗುತ್ತದೆ. ಸ್ವ–ಉದ್ಯೋಗ ಕಾರ್ಯಕ್ರಮ ಅನುಷ್ಠಾನಗೊಳಿಸಲು 30 ಜಿಲ್ಲೆಗಳಲ್ಲಿ ಯೋಜನಾ ಬೆಂಬಲ ಸಂಸ್ಥೆಗಳು ಮತ್ತು ಕೌಶಲ್ಯಾಭಿವೃದ್ದಿ ವೃತ್ತಿ ತರಬೇತಿ ಆಧಾರಿತ ಉದ್ಯೋಗ ಕಲ್ಪಿಸಲು 20 ಯೋಜನಾ ಅನುಷ್ಠಾನ ಸಂಸ್ಥೆಗಳ ಸೇವೆ ಪಡೆಯಲಾಗಿದ್ದು, ಪ್ರಸ್ತುತ 41 ಯೋಜನಾ ಬೆಂಬಲ ಸಂಸ್ಥೆಗಳು ಮತ್ತು 14 ಯೋಜನಾ ಅನುಷ್ಠಾನ ಸಂಸ್ಥೆಗಳು ರಾಜೀವ್ ಗಾಂಧಿ ಚೈತನ್ಯ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ.

ಸ್ವ–ಉದ್ಯೋಗ ಆಯ್ಕೆಮಾಡಿಕೊಂಡಿರುವ ಫಲಾನುಭವಿಗಳಿಗೆ ಮಾರ್ಗದರ್ಶನ ನೀಡಲು ಅನುವಾಗುವಂತೆ ಯೋಜನಾ ಬೆಂಬಲ ಸಂಸ್ಥೆಯ ಪ್ರತಿನಿಧಿಗೆ ಯೋಜನೆಯ ಗುರಿ, ಉದ್ದೇಶಗಳು ಮತ್ತು ಅನುಷ್ಠಾನದ ಬಗ್ಗೆ ತರಬೇತಿಯನ್ನು ನೀಡಲಾಗುತ್ತದೆ, ತರಬೇತಿ ಪಡೆದ ಪ್ರತಿನಿಧಿ ಮಾಸ್ಟರ್ ಟ್ರೈನರ್ ಆಗಿ ಕಾರ್ಯನಿರ್ವಹಿಸಿ ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಯನ್ನು ನೀಡುತ್ತಾರೆ.

ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಜಂಟಿ ಬಾಧ್ಯತಾ ಗುಂಪುಗಳನ್ನು(ಜೆಎಲ್‌ಜಿ) ರಚಿಸಿ ಅವುಗಳ ಯೋಜನಾ ವರದಿಯನ್ನು ತಯಾರಿಸಿ ಅವಶ್ಯವಿರುವ ಎಲ್ಲಾ ದಾಖಲೆಗಳೊಂದಿಗೆ ಸಾಲ ಮಂಜೂರಾತಿಗಾಗಿ ಬ್ಯಾಂಕಿಗೆ ಸಲ್ಲಿಸಿ, ಜಂಟಿ ಬಾದ್ಯತಾ ಗುಂಪು ಮತ್ತು ವೈಯಕ್ತಿಕ ಫಲಾನುಭವಿಗಳ ಘಟಕ ಸ್ಥಾಪನೆಯಾಗುವವರೆಗೂ ಮಾರ್ಗದರ್ಶನ ನೀಡುತ್ತಾರೆ.

ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಬಗ್ಗೆ ರಾಜ್ಯದ ಆರ್‌ಸೆಟಿ/ರೂಡ್‌ಸೆಟಿ ನಿರ್ದೇಶಕರು, ಜಿಲ್ಲಾ ಪಂಚಾಯತಿಯ ಯೋಜನಾ ನಿರ್ದೇಶಕರುಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳು, ಇತರೆ ಅನುಷ್ಠಾನ ಇಲಾಖೆ ಮತ್ತು ಬ್ಯಾಂಕ್ ಸಿಬ್ಬಂದಿಗಳಿಗೆ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಬಗ್ಗೆ ಆರ್‌ಸೆಟಿ/ರೂಡ್‌ಸೆಟಿ ಗಳ ಮೂಲಕ ತರಬೇತಿ ನೀಡಿ ಅರಿವು ಮೂಡಿಸಲಾಗುತ್ತಿದೆ.

ಯೋಜನೆಯ ಬಗ್ಗೆ ಫಲಾನುಭವಿಗಳು ಮತ್ತು ತರಬೇತುದಾರರಿಗೆ ಸಂಪೂರ್ಣ ಮಾಹಿತಿ ಒದಗಿಸಲು ಮಾಹಿತಿ ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮದಡಿ "ತರಬೇತಿ ಕೈಪಿಡಿ" ಮತ್ತು "ನಮ್ಮ ಪುಸ್ತಕ" ಗಳನ್ನು ಮುದ್ರಿಸಿ ಸರಬರಾಜು ಮಾಡಲಾಗಿದೆ. ಕೌಶಲ್ಯಾಭಿವೃದ್ಧಿ ವೃತ್ತಿ ತರಬೇತಿ ಆಧಾರಿತ ಉದ್ಯೋಗಕ್ಕೆ ಸಂಬಂಧಿಸಿದಂತೆ ಈಗಾಗಲೇ ಗದಗ, ಕೊಪ್ಪಳ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದೆ. ಉದ್ಯೋಗ ಮೇಳದಲ್ಲಿ ಫಲಾನುಭವಿಗಳು ವಿವಿಧ ಯೋಜನಾ ಅನುಷ್ಠಾನ ಸಂಸ್ಥೆಗಳನ್ನು ನೇರವಾಗಿ ಭೇಟಿ ಮಾಡಿ ತಮಗೆ ಇಚ್ಛೆ ಇರುವ ಟ್ರೇಡ್ ಆಯ್ಕೆಮಾಡಿಕೊಳ್ಳಲು ಅನುಕೂಲವಾಗುತ್ತದೆ.

ಸ್ವ-ಉದ್ಯೋಗದಡಿ ಸಾಲ ಮಂಜೂರಾತಿಯ ಕುರಿತ ಪ್ರಗತಿ ಮಾಹಿತಿಯನ್ನು ಅನುಬಂಧ-4ರಲ್ಲಿ ನೀಡಲಾಗಿದೆ, ಸಾಲ ಮಂಜೂರಾತಿಯಾದ ಫಲಾನುಭವಿಗಳು ಉದ್ಯಮಶೀಲತಾ ತರಬೇತಿಯನ್ನು ಪಡೆದು ಸ್ವ-ಉದ್ಯೋಗ ಘಟಕಗಳನ್ನು ಸ್ಥಾಪಿಸುತ್ತಾರೆ.

**ಗ್ರಾಮೀಣ ಸ್ವ ಉದ್ದಿಮೆ ತರಬೇತಿ ಕೇಂದ್ರಗಳು (ಆರ್‌ಸೆಟಿ):**

ಆರ್‌ಸೆಟಿ ಕೇಂದ್ರಗಳು ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗಿ ಯುವಕ-ಯುವತಿಯರಿಗೆ ಸ್ವಉದ್ಯೋಗ ಕುರಿತು ವಿವಿಧ ರೀತಿಯ ತರಬೇತಿ ನೀಡುತ್ತಿರುವ ಕೇಂದ್ರಗಳಾಗಿವೆ. ರಾಜ್ಯದಲ್ಲಿನ 29 ಜಿಲ್ಲೆಗಳಲ್ಲಿ ಪ್ರಸ್ತುತ 33 ತರಬೇತಿ ಕೇಂದ್ರಗಳಿದ್ದು, ಅವಶ್ಯಕವಾದ ಎಲ್ಲಾ ಸೌಕರ್ಯಗಳು ಮತ್ತು ಮಾನವ ಸಂಪನ್ಮೂಲವನ್ನು ಹೊಂದಿವೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಸುಮಾರು 112 ವಿವಿಧ ರೀತಿಯ ತರಬೇತಿಗಳನ್ನು ನೀಡಲಾಗುತ್ತಿದೆ.

**ಆರ್‌ಸೆಟಿ ಕಾರ್ಯಕ್ರಮದ ಮೂಲಕ ಕಳೆದ ಮೂರು ವರ್ಷಗಳಲ್ಲಿ ಸಾಧಿಸಿದ ಸಾಧನೆ:**

- ಒಟ್ಟು 25175 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದ್ದು, 3649 ಅಭ್ಯರ್ಥಿಗಳು ಬ್ಯಾಂಕನಿಂದ ಸಾಲ ಪಡೆದಿದ್ದು, 1365 ಅಭ್ಯರ್ಥಿಗಳು ಸ್ವಂತ ಬಂಡವಾಳದಿಂದ ಸ್ವಉದ್ಯೋಗವನ್ನು ಪ್ರಾರಂಭಿಸಿರುತ್ತಾರೆ.
- ಶೇ 80 ರಷ್ಟು ಬಿ.ಪಿ.ಎಲ್ ವರ್ಗದ ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಲಾಗಿದೆ.

| ಆರ್‌ಸೆಟಿ ಸಂಸ್ಥೆಗಳಲ್ಲಿ 2015-16ರ ಡಿಸೆಂಬರ್ ವರೆಗಿನ ಪ್ರಗತಿ ವಿವರ | |
|---|---|
| ಒಟ್ಟು ಗುರಿ | 26120 |
| ಒಟ್ಟು ತರಬೇತಿ ನೀಡಿದ ಅಭ್ಯರ್ಥಿಗಳು | 25175 |
| ಒಟ್ಟು ಬಿ.ಪಿ.ಎಲ್ ಅಭ್ಯರ್ಥಿಗಳು | 20958 |
| ಒಟ್ಟು ಪ.ಜಾ ಅಭ್ಯರ್ಥಿಗಳು | 6797 |
| ಒಟ್ಟು ಪ.ಪಂ ಅಭ್ಯರ್ಥಿಗಳು | 1955 |
| ಒಟ್ಟು ಅಲ್ಪಸಂಖ್ಯಾತ ಅಭ್ಯರ್ಥಿಗಳು | 1987 |
| ಒಟ್ಟು ಮಹಿಳಾ ಅಭ್ಯರ್ಥಿಗಳು | 10935 |
| ಒಟ್ಟು ಬ್ಯಾಂಕ್ ಸಾಲ ನೆರವು ಪಡೆದ ಅಭ್ಯರ್ಥಿಗಳು | 3649 |
| ಒಟ್ಟು ಸ್ವಂತ ಬಂಡವಾಳ ತೊಡಗಿಸಿದ ಅಭ್ಯರ್ಥಿಗಳು | 1365 |
| ಉದ್ಯೋಗ ರೂಪಿಸಿದ ಅಭ್ಯರ್ಥಿಗಳು | 199 |

| | |
|---|---|
| ಮುಂಗಡ ಆಯವ್ಯಯ(ಕೋ.ಗಳಲ್ಲಿ) | 7.26 |
| ಒಟ್ಟು ಖರ್ಚು(ಕೋ.ಗಳಲ್ಲಿ) | 1.31 |

**ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯು-ಜಿಕೆವೈ):**

ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ದಿ ಮತ್ತು ಪಂಚಾತ್ ರಾಜ್ ಇಲಾಖೆಯಿಂದ ಪ್ರಾರಂಭ ಮಾಡಿದ್ದು, ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಈ ಕೌಶಲ್ಯಾಭಿವೃದ್ದಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಯೋಜನೆಯನ್ನು **"ಆಜೀವಿಕಾ ಕೌಶಲ್ಯಾಭಿವೃದ್ದಿ ಯೋಜನೆ"** ಎಂದು ಪ್ರಾರಂಭಗೊಂಡಿದ್ದು, ಕೇಂದ್ರ ಸರ್ಕಾರದ ಸುತ್ತೋಲೆಯಂತೆ **"ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ"** ಎಂದು ಮರುನಾಮಕರಣ ಮಾಡಲಾಗಿದೆ.

ಈ ಯೋಜನೆಯು ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆ ಯೋಜನೆಯ ಭಾಗವಾಗಿದ್ದು, ಕೌಶಲ್ಯಾಭಿವೃದ್ದಿ ತರಬೇತಿ ನೀಡಿ ಮತ್ತು ಉದ್ಯೋಗವನ್ನು ಕಲ್ಪಿಸಲಾಗುತ್ತದೆ. ಈ ಯೋಜನೆಯ ಅನುಷ್ಠಾನಕ್ಕೆ ಯೋಜನಾ ಅನುಷ್ಠಾನ ಸಂಸ್ಥೆಗಳನ್ನು ಗುರುತಿಸಲಾಗಿದ್ದು ಅವುಗಳ ಸಹಯೋಗದೊಂದಿಗೆ ಕೌಶಲ್ಯವನ್ನು ಅಭಿವೃದ್ದಿಪಡಿಸಲು ತರಬೇತಿ ನೀಡಿ ಉದ್ಯೋಗಾವಕಾಶ ಕಲ್ಪಿಸಲಾಗುತ್ತಿದೆ.

**ಪ್ರಗತಿ ವಿವರ:**

ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯು ಅಕ್ಟೋಬರ್ 2014ರಲ್ಲಿ ಸಂಜೀವಿನಿ ಕರ್ನಾಟಕ ಜೀವನೋಪಾಯ ಸಂವರ್ಧನ ಸಂಸ್ಥೆಯವತಿಯಿಂದ ಯೋಜನೆಯು ಅನುಷ್ಠಾನಗೊಳಿಸುತ್ತಿದೆ.

ಸಂಜೀವಿನಿ ಸಂಸ್ಥೆಯು ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಅಂತ್ಯೋದಯ ಅಭಿಯಾನದ ಭಾಗವಾಗಿರುತ್ತದೆ.

ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿಯಲ್ಲಿ 2012-13 ರಿಂದ 2014-15 ರವರೆಗೆ ಒಟ್ಟು 43 ಪ್ರಸ್ತಾವನೆಗಳು ಯೋಜನಾ ಅನುಷ್ಠಾನ ಸಂಸ್ಥೆಗಳಿಂದ ಸಲ್ಲಿಕೆಯಾಗಿರುತ್ತದೆ. ಇವುಗಳಲ್ಲಿ 31 ಪ್ರಸ್ತಾವನೆಗಳ ಕೇಂದ್ರ ಗ್ರಾಮೀಣಾಭಿವೃದ್ದಿ ಮಂತ್ರಾಲಯದಿಂದ ಅನುಮೋದನೆಗೊಂಡಿದ್ದು, ಒಟ್ಟು 1,18,173 ಫಲಾನುಭವಿಗಳು ಈ ಯೋಜನೆಯ ಲಾಭ ಪಡೆಯಲಿದ್ದಾರೆ.

ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯ ಸಚಿವಾಲಯವು 2015-16ನೇ ಸಾಲಿನಲ್ಲಿ ಅನುಮೋದಿಸಿದ(ಎಎಪಿ ರಾಜ್ಯದಡಿಯಲ್ಲಿ) ಕ್ರಿಯಾ ಯೋಜನೆಯಂತೆ, ಯೋಜನಾ ವೆಚ್ಚ ರೂ.405.87 ಕೋಟಿಗಳು ಹಾಗೂ ಬೆಂಬಲ ವೆಚ್ಚ ರೂ.50.85 ಕೋಟಿಗಳು ಸೇರಿದಂತೆ ಒಟ್ಟು ಯೋಜನೆಯ ಗಾತ್ರವು ರೂ.456.50 ಕೋಟಿಗಳಾಗಿರುತ್ತದೆ.

ಕೇಂದ್ರ ಗ್ರಾಮೀಣಾಭಿವೃದ್ದಿ ಮಂತ್ರಾಲಯದ ಅಧಿಸೂಚನೆ ಸಂಖ್ಯೆ.ಜೆ-100/2015-ಡಿಡಿಯು-ಜಿಕೆವೈ ದಿನಾಂಕ: 24.07.2015 ರಂತೆ ಕರ್ನಾಟಕ ರಾಜ್ಯವನ್ನು ವಾರ್ಷಿಕ ಕ್ರಿಯಾ ಯೋಜನೆಯ ರಾಜ್ಯವಾಗಿ (ಎಎಪಿ ಸ್ಟೇಟ್) ಪರಿವರ್ತಿಸಲಾಗಿದೆ.

ಈ ಯೋಜನೆಯ ಅನುಷ್ಠಾನಕ್ಕಾಗಿ 2013-14ನೇ ಸಾಲಿನಲ್ಲಿ 15 ಯೋಜನಾ ಅನುಷ್ಠಾನ ಸಂಸ್ಥೆಗಳಿಗೆ ಕೇಂದ್ರ ಗ್ರಾಮೀಣಾಭಿವೃದ್ದಿ ಮಂತ್ರಾಲಯ ಅನುಮೋದಿಸಿರುತ್ತದೆ. ಅದರಂತೆ ಈ 15 ಯೋಜನಾ ಅನುಷ್ಠಾನ ಸಂಸ್ಥೆಗಳು 194 ಕೌಶಲ್ಯ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಿ 75,713 ಫಲಾನುಭವಿಗಳಿಗೆ ಗ್ರಾಮೀಣ ಪ್ರದೇಶದ ಬಡತನದ ನಿರುದ್ಯೋಗಿ ಯುವಕ/ಯುವತಿಯರಿಗೆ ವಿವಿಧ ಟ್ರೇಡ್‌ಗಳಲ್ಲಿ ಅಗತ್ಯಾನುಸಾರ ಕೌಶಲ್ಯ ತರಬೇತಿ ನೀಡಿ ಉದ್ಯೋಗಾವಕಾಶ ಕಲ್ಪಿಸಬೇಕಾಗಿರುತ್ತದೆ.

ಯೋಜನೆಯ ನಿಯಮದಂತೆ ಈ 15 ಯೋಜನಾ ಅನುಷ್ಠಾನ ಸಂಸ್ಥೆಗಳಿಗೆ ರೂ.66.78 ಕೋಟಿಗಳ ಮುಂಗಡ ಹಣವನ್ನು ಮೊದಲನೆ ಕಂತಾಗಿ ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಹೈದರಾಬಾದ್ (ಎನ್ಐಆರ್ಡಿ) ಮೂಲಕ ಬಿಡುಗಡೆ ಮಾಡಲಾಗಿರುತ್ತದೆ.

ಅನುಮೋದನೆಗೊಂಡ 15 ಯೋಜನಾ ಅನುಷ್ಠಾನ ಸಂಸ್ಥೆಗಳಲ್ಲಿ 13 ಸಂಸ್ಥೆಗಳು ಕಾರ್ಯಾರಂಭ ಮಾಡಿರುತ್ತವೆ. ಇನ್ನುಳಿದ ಎರಡು ಯೋಜನಾ ಅನುಷ್ಠಾನ ಸಂಸ್ಥೆಗಳಿಂದ ಐಎಲ್ಎಫ್ಎಸ್ (ILFS- Infrastructure Leasing and Financial Structure) ಮತ್ತು ಹೆಚ್ & ಎಂ ತಾಂತ್ರಿಕ ಕಾರಣಗಳಿಂದಾಗಿ ಕಾರ್ಯಾರಂಭ ಮಾಡಿರುವುದಿಲ್ಲ, ಆದುದರಿಂದ ಹೆಚ್ & ಎಂ ಯೋಜನಾ ಅನುಷ್ಠಾನ ಸಂಸ್ಥೆಯನ್ನು ರದ್ದುಗೊಳಿಸಿದ್ದು, ಐಎಲ್ಎಫ್ಎಸ್ (ILFS- Infrastructure Leasing and Financial Structure) ಸಂಸ್ಥೆಯ ಕೋರಿಕೆಯಂತೆ ಸಂಸ್ಥೆಯ ಹೆಸರನ್ನು ಪರಿಷ್ಕರಿಸಲು ಅನುಮೋದನೆಯನ್ನು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ನೀಡಬೇಕಿರುತ್ತದೆ.

ಯೋಜನಾ ಅನುಷ್ಠಾನ ಸಂಸ್ಥೆಗಳು ಈ ಹಿಂದೆ ಅನುಮೋದನೆಗೊಂಡಿರುವಂತೆ ನಿಗಧಿತ ಸಮಯದಲ್ಲಿ ಕೌಶಲ್ಯ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಫಲಾನುಭವಿಗಳನ್ನು (ಅರ್ಹ ಅಭ್ಯರ್ಥಿಗಳನ್ನು) ಒಗ್ಗೂಡಿಸಲು/ಆಯ್ಕೆಮಾಡಲು, ತರಬೇತಿ ನೀಡಲು ಮತ್ತು ಉದ್ಯೋಗಾವಕಾಶ ಕಲ್ಪಿಸಲು ವಿಳಂಬ ಮಾಡಿದ ಕಾರಣ 13 ಯೋಜನಾ ಅನುಷ್ಠಾನ ಸಂಸ್ಥೆಗಳ ಯೋಜನೆಯ ಕಾರ್ಯಕ್ಷಮತೆಯನ್ನು ಪರಿಶೀಲಿಸಿ ಗುರಿ ಮತ್ತು ಸಮಯವನ್ನು ಪರಿಷ್ಕರಿಸಲಾಗಿರುತ್ತದೆ. ಪ್ರಸ್ಥುತ 13 ಯೋಜನಾ ಅನುಷ್ಠಾನ ಸಂಸ್ಥೆಗಳು 2016–17 ರ ಒಳಗಾಗಿ 58,342 ಅಭ್ಯರ್ಥಿಗಳಿಗೆ ತರಬೇತಿ ನೀಡಿ ಉದ್ಯೋಗ ಕಲ್ಪಿಸಬೇಕಾಗಿದ್ದು, ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು 121 ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಬೇಕಾಗಿರುತ್ತದೆ.

ಡಿಡಿಯು–ಜಿಕೆವೈ ಯೋಜನೆಯಲ್ಲಿ ಡಿಸೆಂಬರ್ 2015ರ ಅಂತ್ಯಕ್ಕೆ ಸಾಧಿಸಲಾಗಿರುವ ಪ್ರಗತಿ ವಿವರಗಳನ್ನು ಅನುಬಂಧ – 5ರಲ್ಲಿ ನೀಡಲಾಗಿದೆ.

ಈಗಾಗಲೇ ತಿಳಿಸಿರುವಂತೆ ಡಿಡಿಯು–ಜಿಕೆವೈ ಯೋಜನೆಯ ಒಟ್ಟಾರೆ ಯೋಜನಾ ಪ್ರಸ್ತಾವನೆಗಳ ಗಾತ್ರವು ರೂ.456.50 ಕೋಟಿಗಳಾಗಿದ್ದು, 31 ಯೋಜನಾ ಅನುಷ್ಠಾನ ಸಂಸ್ಥೆಗಳು ಸಹಯೋಗದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ.

ಯೋಜನೆಯ ಅನುಷ್ಠಾನಕ್ಕೆ ಎರಡನೇ ಹಂತದಲ್ಲಿ 16 ಯೋಜನಾ ಅನುಷ್ಠಾನ ಸಂಸ್ಥೆಗಳನ್ನು ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಅನುಮೋದನೆಗೊಳಿಸಿದ್ದು ಅದರಂತೆ 42641 ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವಕ/ಯುವತಿಯರಿಗೆ 139 ತರಬೇತಿ ಕೇಂದ್ರಗಳಲ್ಲಿ ಕೌಶಲ್ಯ ತರಬೇತಿ ನೀಡಿ ಉದ್ಯೋಗಾವಕಾಶ ಕಲ್ಪಿಸಬೇಕಾಗಿರುತ್ತದೆ. ಈ ಸಂಬಂಧ ಅನುಮೋದಿಸಿದ ಯೋಜನಾ ಅನುಷ್ಠಾನ ಸಂಸ್ಥೆಗಳ ವಿವರ ಹಾಗೂ 2013–14 ರಿಂದ 2015–16ರ ವರೆಗೆ ಅನುಮೋದನೆಗೊಂಡಿರುವ ಪ್ರಸ್ತಾವನೆಗಳ ವಿವರಗಳನ್ನು ಕೆಳಕಂಡ ಕೋಷ್ಟಕದಲ್ಲಿದೆ.

| **ವರ್ಷ** | **ಯೋಜನಾ ಅನುಷ್ಠಾನ ಸಂಸ್ಥೆಗಳು** | **ಗುರಿ** | **ಪ್ರಗತಿ** | |
|---|---|---|---|---|
| | | ಗುರಿ | ತರಬೇತಿ ಪಡೆದವರ ಸಂಖ್ಯೆ | ಉದ್ಯೋಗ ಪಡೆದವರ ಸಂಖ್ಯೆ |
| 2013 - 14 | 8 | 40702 | 0 | - |
| 2014 - 15 | 7 | 35010 | 0 | - |
| 2015 - 16 | 16 | 42461 | 5762 | 2475 |
| **2015ರ ಡಿಸೆಂಬರ್ ವರೆಗೆ** | **31** | **1, 18, 173** | **5762** | **2475** |

ಎರಡನೆಯ ಹಂತದ 16 ಯೋಜನಾ ಅನುಷ್ಠಾನ ಸಂಸ್ಥೆಗಳಿಗೆ ಮೊದಲ ಹಂತದಲ್ಲಿ ಮುಂಗಡ ಹಣವನ್ನು ಬಿಡುಗಡೆ ಮಾಡಬೇಕಿರುತ್ತದೆ. ಯೋಜನಾ ಅನುಷ್ಠಾನ ಸಂಸ್ಥೆಗಳೊಂದಿಗೆ ಕರಾರು ಒಪ್ಪಂದ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, 31.01.2016 ರೊಳಗೆ ಪೂರ್ಣಗೊಳ್ಳಲಿದೆ. ಈ ಕ್ರಮವಾದ ನಂತರ ನಿಯಮಗಳಂತೆ ಯೋಜನಾ ಅನುಷ್ಠಾನ ಸಂಸ್ಥೆಗಳಿಗೆ ಮುಂಗಡ ಹಣವಾಗಿ ಯೋಜನಾ ವೆಚ್ಚದ ಶೇ.25%ರಂತೆ ಒಟ್ಟು ಎಲ್ಲಾ 16 ಯೋಜನಾ ಅನುಷ್ಠಾನ ಸಂಸ್ಥೆಗಳಿಗೆ ರೂ.36.12 ಕೋಟಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ.

## ಯೋಜನೆಯ ಪೂರಕವಾಗಿ ವಿವಿಧ ಚಟುವಟಿಕೆಗಳು

### ಕೌಶಲ್ಯ ಬೇಡಿಕೆ ಕುರಿತ ಕಾರ್ಯಾಗಾರಗಳು:

15 ಫೆಬ್ರವರಿ 2016ರೊಳಗೆ ಜಿಲ್ಲಾ ಮಟ್ಟದಲ್ಲಿ ಯೋಜನಾ ಅನುಷ್ಠಾನ ಸಂಸ್ಥೆಗಳು ಜಿಲ್ಲೆಯಲ್ಲಿನ ಸಹ ಇಲಾಖೆಗಳಾದ ಉದ್ಯೋಗ ಮತ್ತು ತರಬೇತಿ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಮಕ್ಕಳ ಮತ್ತು ಮಹಿಳಾ ಅಭಿವೃದ್ಧಿ ಇಲಾಖೆ, ಯುವಜನ ಸೇವಾ ಮತ್ತು ನೆಹರು ಯುವಕ ಕೇಂದ್ರ ಮುಂತಾದ ಅಧಿಕಾರಿಗಳನ್ನು ಒಳಗೊಂಡವರಿಗೆ ಯೋಜನೆಯ ಕುರಿತು ಮಾಹಿತಿ, ಕೌಶಲ್ಯಗಳ ಕುರಿತ ಸ್ಥಳೀಯ ಮಟ್ಟದಲ್ಲಿ ಇರುವ ಆದ್ಯತೆಗಳ ಕುರಿತ ಕಾರ್ಯಾಗಾರವನ್ನು ಪೂರ್ಣಗೊಳಿಸಲಾಗುವುದು.

### ಅಭ್ಯರ್ಥಿಗಳ ಜಾಗೃತಿ/ಅರಿವು ಮೂಡಿಸುವುದು.

ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಸಹಯೋಗದಲ್ಲಿ ಯೊಜನಾ ಅನುಷ್ಠಾನ ಸಂಸ್ಥೆಗಳು ಸಾಮಾನ್ಯ ಜಾಥಗಳನ್ನು, ಗ್ರಾಮ ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಆಯೋಜಿಸುವ ಮೂಲಕ ನಿರುದ್ಯೋಗಿ ಯುವಜನತೆ ಗುರ್ತಿಸಿ, ಅವರಿಗೆ ಮಾಹಿತಿ ನೀಡಲಾಗಿದ್ದು, ಸುಮಾರು 16,546 ಅಭ್ಯರ್ಥಿಗಳನ್ನು ಡಿಡಿಯು-ಜಿಕೆವೈ, ಕೌಶಲ್ಯ ತರಬೇತಿ (ವಿವಿಧ ಕೌಶಲ್ಯ)ಗೊಳಿಸಲು ಸಜ್ಜುಗೊಳಿಸಲಾಗಿದೆ.

### ಮಾಹಿತಿ ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳು

1. ಯೋಜನೆ ಬಗ್ಗೆ ಜಾಹಿರಾತುಗಳನ್ನು ಪತ್ರಿಕೆಗಳಲ್ಲಿ ನೀಡಲಾಗಿದೆ.
2. ಯೊಜನಾ ಅನುಷ್ಠಾನ ಸಂಸ್ಥೆಗಳ ವತಿಯಿಂದ ಕರಪತ್ರಗಳು ಮತ್ತು ಮಾಹಿತಿ ಪುಸ್ತಕಗಳ ಮುದ್ರಿಸಿ ಹಂಚಲಾಗಿದೆ.
3. ಕೌಶಲ್ಯ ಅಭಿವೃದ್ಧಿಯಲ್ಲಿ ಯಶಸ್ಸುಗಳಿಗೆ ಉದ್ಯೋಗ ಪಡೆದ ಉತ್ತಮ ಅಭ್ಯರ್ಥಿಗಳ ವೀಡಿಯೋಗಳನ್ನು ಸಿದ್ದಪಡಿಸಿ, ಅವುಗಳನ್ನು ಬಳಸಲಾಗಿದೆ.
4. ತಾಲ್ಲೂಕು/ಜಿಲ್ಲಾ ಮಟ್ಟದಲ್ಲಿ 6 ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದೆ.

**Glimpses of the DDU GKY programme**







**DDU GKY Candidates are involved In Swachha Bharatha Abiyana:**








**Candidates were trained & Placed in advanced skill on Security Guard by PIA KAPSTON**








**Candidates are in work place after Placement at workplace During assessment of Candidates:**

## ಸಾಗರ ಮಾಲ ಯೋಜನೆ:

ಗ್ರಾಮೀಣಾಭಿವೃದ್ಧಿ ಸಚಿವಾಲಯದ ಸೂಚನೆಗಳನ್ವಯ ಹಾಗೂ ನಿರ್ದೇಶನಗಳಿಗನುಸಾರ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ “ಸಾಗರ ಮಾಲ” ಎಂಬ ಯೋಜನೆಯನ್ನು ಡಿಡಿಯು–ಜಿಕೆವೈ ಅಡಿಯಲ್ಲಿ (ಕೊಲ್ಲಿ ಪ್ರದೇಶಗಳಲ್ಲಿ ಬರುವ ಜಿಲ್ಲೆಗಳು ಹಾಗೂ ಎಲ್ಲಿ ಹಡಗು ನಿರ್ಮಾಣ ಮತ್ತು ಬಂದರುಗಳಿರುವ ಜಾಗದಲ್ಲಿ ನಿರುದ್ಯೋಗಿ ಯುವಜನತೆಗೆ ಕೌಶಲ್ಯ ತರಬೇತಿ ಕೊಟ್ಟು ಉದ್ಯೋಗ ಕಲ್ಪಿಸಲಾಗುವುದು) ಅನುಷ್ಠಾನಗೊಳಿಸಲಾಗುತ್ತಿದ್ದು, ಕೌಶಲ್ಯ ಅಭಿವೃದ್ಧಿಯೊಂದಿಗೆ ಉದ್ಯೋಗ ದೊರಕಿಸಿಕೊಡುವುದನ್ನು National Shipping Corporation & development ಸಂಸ್ಥೆಯಡಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದರ ಮುಖ್ಯ ಗುರಿ ಎಂದರೆ ಹಡಗು ನಿರ್ವಹಣೆ ಮತ್ತು ಬಂದರುಗಳ ಸಮಗ್ರ ಅಭಿವೃದ್ಧಿ ಯೋಜನೆ ಮತ್ತು ಕೈಗಾರಿಕಾ ವಲಯಗಳಲ್ಲಿ ಚಾಲಕರು, ತಾಂತ್ರಿಕರು, ಆರ್ಥಿಕ ವಲಯ ಪ್ರದೇಶಗಳಲ್ಲಿನ ಸಹಾಯಕರನ್ನು ಆಯ್ಕೆ ಮಾಡಲು 3 ಜಿಲ್ಲೆಗಳ ಅಭ್ಯರ್ಥಿಗಳನ್ನು ಆಯ್ಕೆಮಾಡುವ ಪ್ರಕ್ರಿಯೆಯನ್ನು 15.08.2015 ರಿಂದ ಪ್ರಾರಂಭಿಸಲಾಗಿದ್ದು, ITCOT (Industrial and Technical Consultancy Organization of Tamilnadu Ltd) ಮತ್ತು APITCO (Andhra Pradesh Information and Technology Company) ಸಂಸ್ಥೆಗಳು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ.

## ಕರ್ನಾಟಕ ಮಲ್ಟಿ ಸೆಕ್ಟೋರಿಯಲ್ ಪೌಷ್ಠಿಕ ಪ್ರಾಯೋಗಿಕ ಯೋಜನೆ

ಭಾರತ ದೇಶದ ಪ್ರಸಕ್ತ ಶೇ.50 ರಷ್ಟು ಜನ ಸಂಖ್ಯೆಯು ಪ್ರೋಟೀನ್ ಕ್ಯಾಲರಿ / ಸೂಕ್ಷ್ಮ ಪೋಷಕಾಂಶಗಳ ಕೊರತೆಯಿಂದ ಪ್ರಮುಖ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದೆ. ಈ ಕಾರಣದಿಂದ ದೇಶದ 5 ವರ್ಷದೊಳಗಿನ ಶೇ.50%ರಷ್ಟು ಮಕ್ಕಳು ಸಾವನ್ನಪ್ಪುತ್ತಿದ್ದಾರೆ. ಇದಲ್ಲದೇ ಹದಿಹರೆಯದ ಹೆಣ್ಣು ಮಕ್ಕಳಲ್ಲಿ ಹಾಗೂ ಗರ್ಭಿಣಿಮಹಿಳೆಯರಲ್ಲಿ ಸೂಕ್ಷ್ಮ ಪೋಷಕಾಂಶಗಳ ಕೊರತೆಯ ಕಾರಣ ಗರ್ಭಿಣಿ ಮಹಿಳೆಯರ ಸಾವು ಹಾಗೂ ಕಡಿಮೆ ತೂಕವಿರುವ ಶಿಶುಗಳ ಜನನಕ್ಕೆ ಕಾರಣವಾಗಿರುತ್ತದೆ.

ಕರ್ನಾಟಕ ರಾಜ್ಯವು ದೇಶದ ಹಲವಾರು ಸಾಮಾಜಿಕ ಹಾಗೂ ಆರ್ಥಿಕ ಸೂಚಕಗಳ ಸರಾಸರಿಗಿಂತ ಉತ್ತಮವಾಗಿದ್ದರು ಸಹ ರಾಜ್ಯವು ದೇಶದ ಒಟ್ಟಾರೆ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಅಪೌಷ್ಠಿಕತೆಯ ಸೂಚಕವು ರಾಷ್ಟ್ರೀಯ ಸರಾಸರಿಯನ್ನು ಹೋಲುತ್ತದೆ ಹಾಗೂ ದಕ್ಷಿಣ ರಾಜ್ಯಗಳಿಗಿಂತ ಕೆಳಮಟ್ಟದಲ್ಲಿದೆ. ರಾಜ್ಯದ ಮೂರು ವರ್ಷದೊಳಗಿನ ಮಕ್ಕಳ ಪ್ರಮಾಣ (42.4%) (2005–06ರಲ್ಲಿ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 3ರ ಅಳತೆ), ರಾಷ್ಟ್ರೀಯ ಸರಾಸರಿ(38.4%) ಹಾಗೂ ಇತರೆ ದಕ್ಷಿಣ ರಾಜ್ಯಗಳಾದ ಆಂದ್ರ ಪ್ರದೇಶ (36.4%), ಕೇರಳ (26.4%) ಮತ್ತು ತಮಿಳುನಾಡು (31.1%)ಗಿಂತ ಬಹಳ ಹೆಚ್ಚಿದೆ.

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕುಗಳಲ್ಲಿನ ಕಲಿಕೆಯ ಆಧಾರದ ಮೇಲೆ, ಈ ಯೋಜನೆಯು, ಗುಲ್ಬರ್ಗಾ ಜಿಲ್ಲೆಯ ಚಿಂಚೋಳ್ಳಿ ತಾಲ್ಲೂಕು ಮತ್ತು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲು ಜಪಾನ್ ಸೋಶಿಯಲ್ ಡೆವೆಲಪಮೆಂಟ್ ಫಂಡ್ ಮತ್ತು ವಿಶ್ವ ಬ್ಯಾಂಕ್ ನೆರವಿನ ಅನುದಾನದೊರೆತಿರುತ್ತದೆ

**<u>ಯೋಜನೆಯ ಮುಖ್ಯ ಉದ್ದೇಶಗಳು</u>**

ಅ. ಶಿಶುಗಳು, ಮಕ್ಕಳು, ಹದಿಹರೆಯದ ಹೆಣ್ಣು ಮಕ್ಕಳು, ಗರ್ಭಿಣಿ ಮತ್ತು ಬಾಣಂತಿಯರಪೌಷ್ಠಿಕ ಅಗತ್ಯಗಳ ಉದ್ದೇಶಗಳನ್ನು ಅಂತರ್ ಪೀಳಿಗೆಯ,ಜೀವನಚಕ್ರದ ವಿಧಾನದಲ್ಲಿ ಅಳವಡಿಸಲಾಗುವುದು.

ಆ. ಅಂತರ್ ಪೀಳಿಗೆಯ ಗುಂಪುಗಳಲ್ಲಿ ಕ್ಯಾಲೋರಿ ಪ್ರೋಟೀನ್, ಸೂಕ್ಷ್ಮ ಪೋಷಕಾಂಶಗಳ ಕೊರತೆಯನ್ನು ಸೂಕ್ತ ಶಕ್ತಿಯುತಆಹಾರ ಸೇವನೆಯಿಂದ ನಿವಾರಿಸಲಾಗುವುದು.

ಇ. ಯೋಜನೆಗಳನ್ನು ತೀವ್ರಗೊಳಿಸಿ, ಸಂಯೋಜಿಸಿ, ಉಸ್ತುವಾರಿ ಮಾಡುತ್ತಿರುವುದರಿಂದಅಪೌಷ್ಠಿಕತೆಯ ಮೇಲೆ ಹೆಚ್ಚಿನ ಪ್ರಭಾವ ಬೀರಲಿದೆ. ಉದಾ: ಇಮ್ಯೂನೈಜೆಷನ್, ವಿಟಮೆನ್–ಎ ಪೂರೈಕೆ, ರಕ್ತಹೀನತೆತಡೆಯುವಿಕೆ, ನೀರು ಮತ್ತು ನೈರ್ಮಲ್ಯ ಇತ್ಯಾದಿಗಳನ್ನು ವಿವಿಧ ಕಾರ್ಯಕ್ರಮಗಳನ್ನು ಒಮ್ಮೆಲೇಅನುಷ್ಠಾನಗೊಳಿಸುವುರ ಮೂಲಕ ಕಾರ್ಯಕ್ರಮಗಳ ಅಂತರಗಳನ್ನು ಕಡಿಮೆಗೊಳಿಸಲಾಗಿದೆ.

**ಯೋಜನೆಯ ಅವಧಿ:** ಈ ಯೋಜನೆಯು 3 ವರ್ಷಗಳ ಅವಧಿಯಾಗಿದ್ದು, ಗುಲ್ಬರ್ಗಾಜಿಲ್ಲೆಯ ಚಿಂಚೋಳ್ಳಿ ತಾಲ್ಲೂಕು ಮತ್ತು ರಾಯಚೂರ ಜಿಲ್ಲೆಯ ದೇವದುರ್ಗ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳ್ಳುತ್ತದೆ.

**<u>ಯೋಜನೆಯ ಫಲಾನುಭವಿಗಳು</u>**

1. 3 ವರ್ಷದೊಳಗಿನ ಮಕ್ಕಳು
2. 11 ರಿಂದ 18 ವರ್ಷದ ಕಿಶೋರಿಯರು
3. ಗರ್ಭಿಣಿ ಮಹಿಳೆಯರು
4. ಹಾಲುಣಿಸುವ ತಾಯಂದಿರು

**<u>ಯೋಜನೆಯ ಅನುಷ್ಠಾನ ಕಾರ್ಯತಂತ್ರ</u>**

ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರೇತರ ಸಂಸ್ಥೆಯು ಆಯ್ಕೆಯಾಗಿದ್ದು, ಈ ಸಂಸ್ಥೆಯ ಮುಖ್ಯ ಜವಬ್ದಾರಿಗಳೆನೆಂದರೆ, ಯೋಜನೆಯ ಪೌಷ್ಠಿಕ ಆಹಾರ ಘಟಕ ತಯಾರಿಸುವುದು ಮತ್ತು ತಯಾರಿಕೆಯಲ್ಲಿ ಸ್ವ–ಸಹಾಯ ಸಂಘಗಳನ್ನು ತರಬೇತಿಗೊಳಿಸುವುದು ಹಾಗೂ ತಯಾರಿಸಿದ ಆಹಾರ ಪೊಟ್ಟಣಗಳನ್ನು ಗ್ರಾಮ ಸ್ವಯಂ ಸೇವಕರ ಮೂಲಕ ಫಲಾನುಭವಿಗಳಿಗೆ ವಿತರಿಸುವುದು.

**ಡಿಸೆಂಬರ್ 2015 ರವರೆಗಿನ ಪ್ರಗತಿ:**

1. ಎರಡು ದಿನಗಳ ಆರಂಭಿಕ ಕಾರ್ಯಾಗಾರವನ್ನು ರಾಯಚೂರ ಮತ್ತು ಗುಲ್ಬರ್ಗಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಪ್ರತಿನಿಧಿಗಳಿಗೆ, NIPCCD ಬೆಂಗಳೂರಿನಲ್ಲಿ ಏರ್ಪಡಿಸಲಾಗಿತ್ತು.

2. ದಿನಾಂಕ 06–12–2014 ಮತ್ತು 29–04–2015 ರಂದುಉನ್ನತ ಮಟ್ಟದಅಧ್ಯಕ್ಷರಾದ ಮಾನ್ಯಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು.

3. ದಿನಾಂಕ 29–04–2015 ರಂದು ಉನ್ನತ ಮಟ್ಟದಅಧ್ಯಕ್ಷರಾದ ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಸಭೆಯಲ್ಲಿ ಕರ್ನಾಟಕ ಹೆಲ್ತ್ ಪ್ರಮೋಷನ್‌ಟ್ರಸ್ಟ್, (KHPT) ಸಂಸ್ಥೆಯೊಂದಿಗೆ ತಿಳುವಳಿಕೆ ಒಪ್ಪಂದಕ್ಕೆ ಅನುಮೋದನೆ ಪಡೆಯಲಾಯಿತು ಮತ್ತು ವಿಶ್ವ ಬ್ಯಾಂಕನಿಂದ ಒಪ್ಪಿಗೆ ಪಡೆಯಲಾಯಿತು.

4. ಯೋಜನಾ ಮೇಲ್ವಿಚಾರಣಾ ಘಟಕವು, ಸಲಹೆಗಾರರು ಕೆಸಿಎನ್‌ಎಮ್ ನೇತೃತ್ವದಲ್ಲಿ ರಾಜ್ಯ ಮಟ್ಟದ ಇತರ ಸಿಬ್ಬಂದಿಯೊಂದಿಗೆ ಕಾರ್ಯನಿರ್ವಹಣೆ ಮಾಡುತ್ತಿದೆ.

5. KHPT ಸಂಸ್ಥೆಯು 2 ತಾಲ್ಲೂಕುಗಳಲ್ಲಿ ಯೋಜನಾ ಸಿಬ್ಬಂದಿ ಮತ್ತುಕ್ಷೇತ್ರ ಸಿಬ್ಬಂದಿಯ ನೇಮಕಾತಿಯ ಪ್ರಕ್ರಯೆಯನ್ನು ಪೂರ್ಣಗೊಳಿಸಿದೆ.

6. ಯೋಜನಾ ಸಿಬ್ಬಂದಿ ಮತ್ತು ಕ್ಷೇತ್ರ ಸಿಬ್ಬಂದಿಯ ತರಬೇತಿಯನ್ನು ಪ್ರಾಯೋಗಿಕ ಯೋಜನೆಯ ಗುರಿ ಮತ್ತು ಉದ್ದೇಶಗಳಿಗನುಗುಣವಾಗಿ ಪೂರ್ಣಗೊಳಿಸಿದೆ.

7. ಬಹು ಮಾದ್ಯಮ ಸೇವೆಗಳನ್ನು ಒದಗಿಸಲು ಮೇ// ಆಕಾರ ಅಡ್ವಟೈಜಿಂಗ್& ಮಾರ್ಕೆಟಿಂಗ್ ಸಂಸ್ಥೆಯು ಆಯ್ಕೆಯಾಗಿದೆ.

8. ಈ ಯೋಜನೆಯು ಟಾರ್ಗೆಟ್ ತಾಲ್ಲೂಕುಗಳಾದ ಚಿಂಚೋಳ್ಳಿ ಮತ್ತು ದೇವದುರ್ಗ ತಾಲ್ಲೂಕುಗಳಲ್ಲಿ ಮತ್ತು ಕಂಟ್ರೋಲ್ ತಾಲ್ಲೂಕುಗಳಾದ ಜೇವರ್ಗಿ ಮತ್ತು ಲಿಂಗಸೂಗುರುಗಳಲ್ಲಿ ಮೂಲ ಸಮೀಕ್ಷೆಯನ್ನು ನಡೆಸಲು ಆಕ್ಸಫರ್ಡ ಪಾಲಿಸಿ ಮ್ಯಾನೆಜಮೆಂಟ್, ದೆಹಲಿ, ಸಂಸ್ಥೆಯನ್ನು ವಿಶ್ವ ಬ್ಯಾಂಕ್‌ಆಯ್ಕೆ ಮಾಡಿದೆ.

9. ಆಹಾರ ಉತ್ಪಾದನಾ ಘಟಕ(EDF) ಪೂರಕ ಅಂಶಗಳಿಗೆ ಸಂಬಂಧಿಸಿದಂತೆ ಪೂರ್ವತಯಾರಿ ಆರಂಭಿಸಲಾಗಿದೆ.

10. ಸಹಗಾಮಿ ಮೇಲ್ವಿಚಾರಣೆ ಸಂಸ್ಥೆಯಆಯ್ಕೆಯ ಪ್ರಕ್ರಿಯೆ ಪ್ರಗತಿಯಲ್ಲಿದೆ.

11. ಆಹಾರ ಉತ್ಪಾದನಾ ಘಟಕ(EDF) ಸಂಬಂಧಿಸಿದಂತೆ GAIN ಸಂಸ್ಥೆಯು ಹಣಕಾಸು ನೆರವಿನ ಸಹಾಯ ನೀಡಲು ಮುಂದೆ ಬಂದಿದ್ದು ಅಂದಾಜು 420 ಲಕ್ಷ ಹಣಕಾಸು ನೆರವಿಗೆ ಸಂಬಂಧಿಸಿದಂತೆ ಕರಾರು ಪತ್ರದ ಪ್ರಕ್ರಿಯೆ ಪ್ರಗತಿಯಲ್ಲಿದೆ.

12. KHPT ಸಂಸ್ಥೆಯು ಮೂಲ ಸಮೀಕ್ಷೆಯನ್ನು ಟಾರ್ಗೆಟ್ ತಾಲ್ಲೂಕುಗಳಾದ ಚಿಂಚೋಳ್ಳಿ ಮತ್ತು ದೇವದುರ್ಗಗಳಲ್ಲಿ ಪೂರ್ಣಗೊಳಿಸಿದ್ದು, 34403 ಯೋಜನೆಯ ಫಲಾನುಭವಿಗಳ ಆಯ್ಕೆ ಪೂರ್ಣಗೊಳಿಸಿದೆ (3 ವರ್ಷದೊಳಗಿನ ಮಕ್ಕಳು,11 ರಿಂದ 18 ವರ್ಷದ ಕಿಶೋರಿಯರು, ಗರ್ಭಿನಿ ಮಹಿಳೆಯರು, ಹಾಲುಣಿಸುವ ತಾಯಂದಿರು).

13. 421 ಗ್ರಾಮ ಸ್ವಯಂ ಸೇವಕರ ಆಯ್ಕೆ ಮತ್ತು ತರಬೇತಿ ಪೂರ್ಣಗೊಳಿಸಲಾಗಿದೆ.

14. ಯೋಜನೆಯ ಮೇಲ್ವಿಚಾರಕರಿಗೆ ಮತ್ತು ಗ್ರಾಮ ಸ್ವಯಂ ಸೇವಕರಿಗೆ ಆರೋಗ್ಯ ಮತ್ತು ಪೌಷ್ಠಕ ಕಾರ್ಡ ತುಂಬುವ ಕುರಿತು TOT ತರಬೇತಿಯನ್ನು ಪೂರ್ಣಗೊಳಿಸಲಾಗಿದೆ.

15. 34431 ಆರೋಗ್ಯ ಮತ್ತು ಪೌಷ್ಠಕ ಕಾರ್ಡ ಮುದ್ರಣ ಕಾರ್ಯ ಪೂರ್ಣಗೊಳಿಸಲಾಗಿದೆ.

16. ಸಂವಹನ ಸಾಮಾಗ್ರಿಗಳಾದ ಪೋಸ್ಟರ್ಸ್ ಮತ್ತು ಫ್ಲಿಪ್‌ಚಾರ್ಟ್ಸ್‌ಗೆ ಸಂಬಂಧಿಸಿದಂತೆ ಅಭಿವೃದ್ಧಿಪಡಿಸಲಾಗಿದೆ.

**ಮಾಹಿತಿ ಹಕ್ಕು ಅಧಿನಿಯಮ:**

ಏಫ್ರಿಲ್–2015 ರಿಂದ ಡಿಸೆಂಬರ್–2015 ರವರೆಗೆ ಒಟ್ಟು 18 ಅರ್ಜಿಗಳು ಮಾಹಿತಿ ಹಕ್ಕು ಅಧಿನಿಯಮದಡಿ ಸಲ್ಲಿಕೆ ಆಗಿದ್ದು, ನಿಗಧಿತ ಸಮಯದಲ್ಲಿ ಮಾಹಿತಿ ನೀಡಲಾಗಿದೆ. ಸ್ವೀಕೃತವಾದ ಎಲ್ಲಾ ಅರ್ಜಿಗಳಿಗೂ ನಿಗದಿತ ದಿನಾಂಕದೊಳಗಾಗಿ ಮಾಹಿತಿ ನೀಡಲಾಗಿರುತ್ತದೆ. ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕೃತವಾದ ಅರ್ಜಿಗಳ ವಿವರಗಳನ್ನು ಅನುಬಂಧ – 6ರಲ್ಲಿ ನೀಡಲಾಗಿದೆ.

**ಅನುಬಂಧಗಳು:**

**ಅನುಬಂಧ–1: ಇಂಟೆನ್ಸೀವ್ ತಾಲ್ಲೂಕುಗಳಲ್ಲಿನ ಸಾಂಸ್ಥಿಕ ಬಲವರ್ಧನೆ ಮತ್ತು ಸಾಮರ್ಥ್ಯ ಬಲವರ್ಧನೆಯ ಪ್ರಗತಿ:**

| ಕ್ರ.ಸಂ | ಘಟಕಗಳು | 2015-16 | |
|---|---|---|---|
| | | ಗುರಿ | ಸಾಧನೆ |
| 1 | ಇಂಟೆನ್ಸೀವ್ ಕಾರ್ಯತಂತ್ರವನ್ನು ಅನುಷ್ಠಾನಗೊಳಿಸುತ್ತಿರುವ ಜಿಲ್ಲೆಗಳ ಸಂಖ್ಯೆ | 11 | 25 |
| 2 | ಇಂಟೆನ್ಸೀವ್ ಕಾರ್ಯತಂತ್ರವನ್ನು ಅನುಷ್ಠಾನಗೊಳಿಸುತ್ತಿರುವ ತಾಲ್ಲೂಕುಗಳ ಸಂಖ್ಯೆ | 40 | 84 |
| 3 | ಇಂಟೆನ್ಸೀವ್ ಕಾರ್ಯತಂತ್ರವನ್ನು ಪ್ರಾರಂಭಿಸಲಾಗುವ ಗ್ರಾಮ ಪಂಚಾಯತ್‌ಗಳ ಸಂಖ್ಯೆ | 200 | 245 |
| 4 | ಇಂಟೆನ್ಸೀವ್ ಕಾರ್ಯತಂತ್ರವನ್ನು ಪ್ರಾರಂಭಿಸಲಾಗುವ ಗ್ರಾಮಗಳ ಸಂಖ್ಯೆ | 675 | 1527 |
| 5 | ಉತ್ತೇಜಿಸಲಾದ ಹೊಸ ಸ್ವಸಹಾಯ ಗುಂಪುಗಳ ಸಂಖ್ಯೆ | 1500 | 1243 |
| 6 | ಎನ್‌ಆರ್‌ಎಲ್‌ಎಂ ವ್ಯಾಪ್ತಿಗೆ ತಂದ ಇತರೆ ಸ್ವಸಹಾಯ ಗುಂಪುಗಳ ಸಂಖ್ಯೆ | 9750 | 9069 |
| 7 | ಇಂಟೆನ್ಸೀವ್ ತಾಲ್ಲೂಕುಗಳಲ್ಲಿ ಎನ್‌ಆರ್‌ಎಲ್‌ಎಂ ವ್ಯಾಪ್ತಿಯಲ್ಲಿರುವ ಸ್ವಸಹಾಯ ಗುಂಪುಗಳ ಸಂಖ್ಯೆ | 11250 | 10312 |
| 8 | ಮೂಲ ತರಬೇತಿ ನೀಡಿದ ಸ್ವಸಹಾಯ ಗುಂಪುಗಳ ಸಂಖ್ಯೆ | 11250 | 2629 |
| 9 | ಗುಣಮಟ್ಟ ಪುಸ್ತಕ ನಿರ್ವಹಣೆಯ ಅಭ್ಯಾಸಗಳನ್ನು ಪರಿಚಯಿಸಲಾದ ಸ್ವಸಹಾಯ ಗುಂಪಗಳ ಸಂಖ್ಯೆ | 11250 | 6754 |
| 10 | ನಿಯೋಜಿಸಲಾದ ಸ್ವಸಹಾಯ ಗುಂಪುಗಳ ಪುಸ್ತಕ ನಿರ್ವಾಹಕರುಗಳ ಸಂಖ್ಯೆ | 11250 | 6754 |
| 11 | ನಿಯೋಜಿಸಲಾದ ಮುಖ್ಯ ಪುಸ್ತಕ ನಿರ್ವಾಹಕರುಗಳ ಸಂಖ್ಯೆ | 450 | 320 |
| 12 | ಪಂಚಸೂತ್ರವನ್ನು ಅನುಸರಿಸುತ್ತಿರುವ ಸ್ವಸಹಾಯ ಗುಂಪುಗಳ ಸಂಖ್ಯೆ | 11250 | 9069 |
| 13 | ಇಂಟೆನ್ಸೀವ್ ತಾಲ್ಲೂಕುಗಳಲ್ಲಿ ತರಬೇತಿ ಪಡೆದ ಆಂತರಿಕ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಸಂಖ್ಯೆ (ಮುಖ್ಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳು) | 400 | 604 |
| 14 | ರಚಿಸಲಾದ ವಾರ್ಡ್ ಮಟ್ಟದ ಒಕ್ಕೂಟಗಳ ಸಂಖ್ಯೆ | 1000 | 1314 |
| 15 | ವಾರ್ಡ್ ಮಟ್ಟದ ಒಕ್ಕೂಟಗಳಲ್ಲಿ ಸದಸ್ಯತ್ವ ಹೊಂದಿರುವ ಸ್ವಸಹಾಯ ಗುಂಪುಗಳ ಸಂಖ್ಯೆ | 5000 | 9096 |
| 16 | ತರಬೇತಿ ನೀಡಲಾದ ವಾರ್ಡ್ ಮಟ್ಟದ ಒಕ್ಕೂಟಗಳ ಸಂಖ್ಯೆ | 1000 | 396 |
| 17 | ರಚಿಸಲಾದ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ಸಂಖ್ಯೆ | 200 | 237 |
| 18 | ಆರಂಭಿಕ ನಿಧಿ ನೀಡಲಾದ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ಸಂಖ್ಯೆ | 350 | 181 |
| 19 | ವಾರ್ಡ್ ಮಟ್ಟದ ಒಕ್ಕೂಟಗಳ EC ತರಬೇತಿಗಳ ಸಂಖ್ಯೆ | 1000 | 396 |
| 20 | ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ EC ತರಬೇತಿಗಳ ಸಂಖ್ಯೆ | 200 | 166 |
| 21 | ಪೂರ್ಣಗೊಳಿಸಿರುವ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ತರಬೇತಿ ಸುತ್ತುಗಳ ಸಂಖ್ಯೆ | 500 | 974 |
| 22 | ಇಂಟೆನ್ಸೀವ್ ತಾಲ್ಲೂಕುಗಳಲ್ಲಿ ತರಬೇತಿ ನೀಡಲಾದ ಆಂತರಿಕ ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಸಂಖ್ಯೆ | 2250 | 808 |

**ಅನುಬಂಧ – 2: ಸ್ವಸಹಾಯ ಗುಂಪುಗಳ ಮಾಹಿತಿ ಸಂಗ್ರಹಣೆ ಹಾಗೂ ಗಣಕೀಕರಣ:**

| ಕ್ರ. ಸಂ | ಜಿಲ್ಲೆ | ಗುರಿ | 2015-16 | |
|---|---|---|---|---|
| | | | ಸಾಧನೆ | % |
| 1 | ಬಾಗಲಕೋಟೆ | 7,464 | 7464 | 100 |
| 2 | ಬೆಂಗಳೂರು ಗ್ರಾಮಾಂತರ | 5,625 | 3941 | 70 |
| 3 | ಬೆಂಗಳೂರು ನಗರ | 3,946 | 3946 | 100 |
| 4 | ಬೆಳಗಾಂ | 23,427 | 23427 | 100 |
| 5 | ಬಳ್ಳಾರಿ | 11,000 | 7514 | 68 |
| 6 | ಬಿದರ್ | 19,802 | 8491 | 43 |
| 7 | ಬಿಜಾಪುರ | 6,385 | 6385 | 100 |
| 8 | ಚಾಮರಾಜನಗರ | 9,172 | 9172 | 100 |
| 9 | ಚಿಕ್ಕಬಳ್ಳಾಪುರ | 7,000 | 4491 | 64 |
| 10 | ಚಿಕ್ಕಮಗಳೂರು | 11,275 | 7866 | 70 |
| 11 | ಚಿತ್ರದುರ್ಗ | 19,050 | 14677 | 77 |
| 12 | ದಕ್ಷಿಣ ಕನ್ನಡ | 9,000 | 8384 | 93 |
| 13 | ದಾವಣಗೆರೆ | 12,020 | 12020 | 100 |
| 14 | ಧಾರವಾಡ | 11,694 | 8586 | 73 |
| 15 | ಗದಗ | 10,932 | 6766 | 62 |
| 16 | ಗುಲಬರ್ಗಾ | 6,030 | 4914 | 81 |
| 17 | ಹಾಸನ | 17,929 | 16441 | 92 |
| 18 | ಹಾವೇರಿ | 12,678 | 11697 | 92 |
| 19 | ಕೊಡಗು | 4,000 | 3037 | 76 |
| 20 | ಕೋಲಾರ | 6,351 | 4297 | 68 |
| 21 | ಕೊಪ್ಪಳ | 10,282 | 10099 | 98 |
| 22 | ಮಂಡ್ಯ | 15,096 | 15096 | 100 |
| 23 | ಮೈಸೂರು | 16,110 | 16070 | 100 |
| 24 | ರಾಮನಗರ | 5,211 | 5211 | 100 |
| 25 | ರಾಯಚೂರು | 7,500 | 3718 | 50 |
| 26 | ಶಿವಮೊಗ್ಗ | 12,000 | 12031 | 100 |
| 27 | ತುಮಕೂರು | 27,012 | 27012 | 100 |
| 28 | ಉಡುಪಿ | 9,500 | 7684 | 81 |
| 29 | ಉತ್ತರ ಕನ್ನಡ | 8,656 | 8656 | 100 |
| 30 | ಯಾದಗಿರಿ | 5,316 | 2522 | 47 |
| **ಒಟ್ಟು** | | **331,463** | **281615** | **85** |

**ಅನುಬಂಧ–3: ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಕೌಶಲ್ಯಾಭಿವೃದ್ಧಿ ವೃತ್ತಿ ತರಬೇತಿ ಆಧಾರಿತ ಉದ್ಯೋಗದ ಪ್ರಗತಿ ವಿವರ:**

| ಕ್ರ.ಸಂ | ಜಿಲ್ಲೆಯ ಹೆಸರು | 2015–16 ಗುರಿ | 2015–16ನೇ ಉದ್ಯೋಗ ಪಡೆದ ಫಲಾನುಭವಿಗಳ ಸಂಖ್ಯೆ |
|---|---|---|---|
| 1 | ಬಾಗಲಕೋಟೆ | 5100 | 5 |
| 2 | ಬೆಂಗಳೂರು(ನ) | 2540 | 60 |
| 3 | ಬೆಂಗಳೂರು(ಗ್ರಾ) | 2625 | 2 |
| 4 | ಬೆಳಗಾವಿ | 12925 | 120 |
| 5 | ಬಳ್ಳಾರಿ | 5100 | 406 |
| 6 | ಬೀದರ್ | 4525 | 0 |
| 7 | ವಿಜಯಪುರ | 5450 | 0 |
| 8 | ಚಾಮರಾಜನಗರ | 3275 | 0 |
| 9 | ಚಿಕ್ಕಮಗಳೂರು | 5675 | 28 |
| 10 | ಚಿತ್ರದುರ್ಗ | 4750 | 0 |
| 11 | ಚಿಕ್ಕಬಳ್ಳಾಪುರ | 3925 | 0 |
| 12 | ದಕ್ಷಿಣ ಕನ್ನಡ | 5800 | 0 |
| 13 | ದಾವಣಗೆರೆ | 5875 | 123 |
| 14 | ಧಾರವಾಡ | 3575 | 0 |
| 15 | ಗದಗ | 3025 | 79 |
| 16 | ಕಲಬುರಗಿ | 6575 | 85 |
| 17 | ಹಾಸನ | 6650 | 150 |
| 18 | ಹಾವೇರಿ | 5375 | 72 |
| 19 | ಕೊಡಗು | 2600 | 0 |
| 20 | ಕೋಲಾರ | 3900 | 249 |
| 21 | ಕೊಪ್ಪಳ | 3925 | 119 |
| 22 | ಮಂಡ್ಯ | 5850 | 59 |
| 23 | ಮೈಸೂರು | 6700 | 0 |
| 24 | ರಾಯಚೂರು | 4625 | 0 |
| 25 | ರಾಮನಗರ | 3250 | 16 |
| 26 | ಶಿವಮೊಗ್ಗ | 6775 | 149 |
| 27 | ತುಮಕೂರು | 8275 | 175 |
| 28 | ಉಡುಪಿ | 4050 | 0 |
| 29 | ಉತ್ತರ ಕನ್ನಡ | 5800 | 62 |
| 30 | ಯಾದಗಿರಿ | 3125 | 70 |
| **ಒಟ್ಟು** | | **151640** | **2029** |

## ಅನುಬಂಧ – 4: ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಸ್ವ–ಉದ್ಯೋಗದಡಿ ಪ್ರಗತಿ ವಿವರ:

| ಕ್ರ.ಸಂ | ಜಿಲ್ಲೆಯ ಹೆಸರು | 2015–16 ಗುರಿ | 2015–16ನೇ ಸಾಲಿನಲ್ಲಿ ಸಾಲ ಮಂಜೂರಾದ ಅಭ್ಯರ್ಥಿಗಳ ಸಂಖ್ಯೆ |
|---|---|---|---|
| 1 | ಬಾಗಲಕೋಟೆ | 5100 | 521 |
| 2 | ಬೆಂಗಳೂರು(ನ) | 2540 | 111 |
| 3 | ಬೆಂಗಳೂರು(ಗ್ರಾ) | 2625 | 99 |
| 4 | ಬೆಳಗಾವಿ | 12925 | 688 |
| 5 | ಬಳ್ಳಾರಿ | 5100 | 208 |
| 6 | ಬೀದರ್ | 4525 | 1142 |
| 7 | ವಿಜಯಪುರ | 5450 | 1176 |
| 8 | ಚಾಮರಾಜನಗರ | 3275 | 338 |
| 9 | ಚಿಕ್ಕಮಗಳೂರು | 5675 | 95 |
| 10 | ಚಿತ್ರದುರ್ಗ | 4750 | 36 |
| 11 | ಚಿಕ್ಕಬಳ್ಳಾಪುರ | 3925 | 24 |
| 12 | ದಕ್ಷಿಣ ಕನ್ನಡ | 5800 | 237 |
| 13 | ದಾವಣಗೆರೆ | 5875 | 253 |
| 14 | ಧಾರವಾಡ | 3575 | 50 |
| 15 | ಗದಗ | 3025 | 287 |
| 16 | ಕಲಬುರಗಿ | 6575 | 1528 |
| 17 | ಹಾಸನ | 6650 | 100 |
| 18 | ಹಾವೇರಿ | 5375 | 69 |
| 19 | ಕೊಡಗು | 2600 | 204 |
| 20 | ಕೋಲಾರ | 3900 | 746 |
| 21 | ಕೊಪ್ಪಳ | 3925 | 13 |
| 22 | ಮಂಡ್ಯ | 5850 | 55 |
| 23 | ಮೈಸೂರು | 6700 | 1637 |
| 24 | ರಾಯಚೂರು | 4625 | 150 |
| 25 | ರಾಮನಗರ | 3250 | 62 |
| 26 | ಶಿವಮೊಗ್ಗ | 6775 | 126 |
| 27 | ತುಮಕೂರು | 8275 | 602 |
| 28 | ಉಡುಪಿ | 4050 | 40 |
| 29 | ಉತ್ತರ ಕನ್ನಡ | 5800 | 498 |
| 30 | ಯಾದಗಿರಿ | 3125 | 21 |
| **ಒಟ್ಟು** | | **151640** | **11116** |

## ಅನುಬಂಧ – 5: ಡಿಡಿಯು–ಜಿಕೆವೈ ಯೋಜನೆಯ ಪ್ರಗತಿ ವಿವರ:

| ಕ್ರ. ಸಂ | ಯೋಜನಾ ಅನುಷ್ಠಾನ ಸಂಸ್ಥೆ | ಮಂಜೂರಾದ ಗುರಿ | ಯೋಜಿತ ಕೇಂದ್ರಗಳ ು | ಪ್ರಾರಂಭವಾದ ಕೇಂದ್ರಗಳು | ಅಭ್ಯರ್ಥಿಗಳ ಒಟ್ಟು ದಾಖಲಾತಿ ಸಂಖ್ಯೆ | ಒಟ್ಟು ತರಬೇತಿ ಪೂರ್ಣಗೊಂಡ ಅಭ್ಯರ್ಥಿಗಳ ಸಂಖ್ಯೆ | ಉದ್ಯೋಗ ಅವಕಾಶ ಕಲ್ಪಿಸಲಾದ ಫಲಾನುಭವಿಗಳ ಸಂಖ್ಯೆ | ಕೇಂದ್ರಗಳ ಸಾಮರ್ಥ್ಯ ್ | ತರಬೇತಿ ಪಡೆಯುತ್ತಿರ ುವವರು |
|---|---|---|---|---|---|---|---|---|---|
| 1 | ಲಾರಸ್ | 3700 | 10 | 4 | 775 | 442 | 116 | 433 | 288 |
| 2 | ಎಆರ್‌ಟಿಜೆಎಸ್ | 1906 | 6 | 4 | 1208 | 742 | 645 | 466 | 466 |
| 3 | ಐಕ್ಯಾ | 4000 | 7 | 4 | 1096 | 861 | 402 | 480 | 64 |
| 4 | ಕ್ಯಾಪ್ಸ್ಟನ್ | 1536 | 3 | 1 | 417 | 224 | 224 | 140 | 62 |
| 5 | ವಾಜೀರ್ | 4620 | 8 | 4 | 668 | 234 | 166 | 384 | 349 |
| 6 | ಶ್ರೀರಾಮ್ | 5940 | 4 | 4 | 736 | 495 | 79 | 695 | 241 |
| 7 | ಟೆಕ್ನೋ ಪಾರ್ಕ್ | 6000 | 5 | 2 | 340 | 256 | 86 | 180 | 110 |
| 8 | ಐಸಿಎಫ್‌ಸಿ | 1525 | 10 | 5 | 371 | 371 | 74 | 405 | 0 |
| 9 | ಇಟ್‌ಕಾಟ್ | 4000 | 19 | 13 | 1673 | 556 | 210 | 1300 | 1118 |
| 10 | ಎವಾನ್ | 4000 | 5 | 4 | 979 | 714 | 278 | 435 | 274 |
| 11 | ಸಿಸಿಡಿ | 1800 | 1 | 1 | 165 | 131 | 60 | 105 | 56 |
| 12 | ಒರಿಯನ್ | 4325 | 8 | 4 | 1695 | 1365 | 784 | 280 | 365 |
| 13 | ಅಪಿಟ್‌ಕೋ | 15000 | 35 | 21 | 2134 | 748 | 120 | 1612 | 1492 |
| | **ಒಟ್ಟು** | **58352** | **121** | **71** | **12257** | **7139** | **3244** | **6915** | **4885** |

ಅನುಬಂಧ – 6: ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕರಿಸಿರುವ ಅರ್ಜಿಗಳ ವಿವರ:

| **ಸ್ವೀಕರಿಸಿದ ಅರ್ಜಿಗಳ ಸಂಖ್ಯೆ** | **ಉತ್ತರಿಸಿದ ಅರ್ಜಿಗಳ ಸಂಖ್ಯೆ** | **ತಿರಸ್ಕೃತ ಅರ್ಜಿಗಳ ಸಂಖ್ಯೆ** | **ಉಳಿಕೆ ಅರ್ಜಿಗಳ ಸಂಖ್ಯೆ** | **ಸ್ವೀಕೃತವಾದ ಮೊತ್ತ (ರೂ.ಗಳಲ್ಲಿ)** |
|---|---|---|---|---|
| 18 | 18 | 0 | 0 | 110 |